# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಸೆಪ್ಟೆಂಬರ್ 01, 2024

ಸಂಪುಟ : 51 ಸಂಚಿಕೆ : 110 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ತೂಕದಲ್ಲಿ ವಂಚನೆ: ನ್ಯಾಯ ಬೆಲೆ ಅಂಗಡಿ ಪರವಾನಗಿ ಅಮಾನತ್ತು

**ಜಿಲ್ಲಾಧಿಕಾರಿಯಿಂದ ತೂಕ ಪರಿಶೀಲನೆ: ವಂಚನೆ ತಿಳಿದು ಸ್ಥಳದಲ್ಲೇ ಅಮಾನತ್ತು ಮಾಡಲು ಆದೇಶ**

ದಾವಣಗೆರೆ, ಆ.31- ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿಯಲ್ಲಿನ ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿದಾರರಿಗೆ ತೂಕ ದಲ್ಲಿ ವಂಚನೆ ಮಾಡಿದ ಪ್ರಕರಣದಡಿ ಸ್ಥಳದಲ್ಲೇ ನ್ಯಾಯಬೆಲೆ ಅಂಗಡಿ ಅಮಾನತ್ತು ಮಾಡಲು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಆದೇಶ ನೀಡಿದ್ದಾರೆ.

ಶನಿವಾರ ಹೊನ್ನಾಳಿಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ, ದುರಸ್ತಿಯಾದ ಕಾಲುವೆ ವೀಕ್ಷಣೆಯಾಗಿ ಬಸವನಹಳ್ಳಿ ಮಾರ್ಗವಾಗಿ ತೆರಳಿದ್ದರು. ಅಲ್ಲಿ ನ್ಯಾಯಬೆಲೆ ಅಂಗಡಿ ನೋಡಿದ ಜಿಲ್ಲಾಧಿಕಾರಿ ಯವರು ತಮ್ಮ ವಾಹನ ನಿಲ್ಲಿಸಿ ಅಂಗಡಿಗೆ ತೆರಳಿದಾಗ ಅಲ್ಲಿ ಓರ್ವ ಮಹಿಳೆ ಪಡಿತರ ಧಾನ್ಯಗಳನ್ನು ಪಡೆದುಕೊಂಡಿದ್ದರು. ಅವರನ್ನು ಮಾತನಾಡಿಸಿ ನಿಮ್ಮ ಮನೆಯಲ್ಲಿ ಎಷ್ಟು ಸದಸ್ಯರಿದ್ದಾರೆ, (2ನೇ ಪುಟಕ್ಕೆ)

## ಹರಿಯಾಣ ಚುನಾವಣೆ ಅ.5ಕ್ಕೆ ಮುಂದೂಡಿಕೆ

ನವದೆಹಲಿ, ಆ. 31 - ಹರಿಯಾಣ ವಿಧಾನಸಭಾ ಚುನಾವಣೆಯ ದಿನಾಂಕವನ್ನು ಚುನಾವಣಾ ಆಯೋಗ ಬದಲಿಸಿದ್ದು, ಅಕ್ಟೋಬರ್ 5ರಂದು ಚುನಾವಣೆ ನಡೆಸುವುದಾಗಿ ತಿಳಿಸಿದೆ. ಈ ಹಿಂದೆ ಅಕ್ಟೋಬರ್ 1ರಂದು ಚುನಾವಣೆ ನಡೆಸುವುದಾಗಿ ಆಯೋಗ ತಿಳಿಸಿತ್ತು.

ಬಿಷ್ಣೋಯಿ ಸಮುದಾಯದ ಉತ್ಸವದ ಹಿನ್ನೆಲೆಯಲ್ಲಿ ಚುನಾವಣಾ ದಿನಾಂಕ ಮುಂದೂಡಲಾಗಿದೆ. ಜಮ್ಮು ಮತ್ತು ಕಾಶ್ಮೀರ ಹಾಗೂ ಹರಿಯಾಣ ವಿಧಾನಸಭಾ ಚುನಾವಣೆ ಫಲಿತಾಂಶ ಅಕ್ಟೋಬರ್ 8ರಂದು ಪ್ರಕಟವಾಗಲಿದೆ.

## ಸಿಎಂ ವಿರುದ್ಧ ಪ್ರಾಸಿಕ್ಯೂಷನ್: ವಿಚಾರಣೆ ಮುಂದಕ್ಕೆ

**ನಾಳೆ ಮಧ್ಯಾಹ್ನ 2.30ಕ್ಕೆ ವಿಚಾರಣೆ ಮುಂದೂಡಿದ ರಾಜ್ಯ ಹೈಕೋರ್ಟ್**

ಬೆಂಗಳೂರು, ಆ. 31 -ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದನ್ನು ಪ್ರಶ್ನಿಸಿದ ಮೊಕದ್ದಮೆಯ ವಿಚಾರಣೆಯನ್ನು ರಾಜ್ಯ ಹೈಕೋರ್ಟ್ ಸೆಪ್ಟೆಂಬರ್ 2ರ ಮಧ್ಯಾಹ್ನ 2.30ಕ್ಕೆ ಮುಂದೂಡಿದೆ.

ಇದಕ್ಕೂಮುನ್ನ, ವಿಚಾರಣೆಯ ಮೂರನೇ ದಿನವಾದ ಇಂದು ಮುಖ್ಯಮಂತ್ರಿ ಹಾಗೂ ದೂರುದಾರರ ಪರ ಕರ್ನಾಟಕ ಹಾಗೂ ಸುಪ್ರೀಂಕೋರ್ಟ್‌ನ ಘಟಾನುಘಟಿ ನ್ಯಾಯವಾದಿಗಳು ವಾದ-ಪ್ರತಿವಾದ ಮಂಡಿಸಿದರು.

ರಾಜ್ಯಪಾಲರ ನಿರ್ಧಾರ ಪ್ರಶ್ನಿಸಿ ಮುಖ್ಯಮಂತ್ರಿ ಸಲ್ಲಿಸಿರುವ ಅರ್ಜಿಯ ಮೂರನೇ ದಿನದ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಪೀಠ ಬೆಳಗ್ಗೆ ಕೈಗೆತ್ತಿಕೊಂಡಿತು. ಇಡೀ ದಿನ ಉಭಯ ಕಕ್ಷಿದಾರರ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು ಬಾಕಿ ವಿಚಾರಣೆಯನ್ನು ಸೆಪ್ಟೆಂಬರ್ 2ಕ್ಕೆ ಮುಂದೂಡಿ ಆದೇಶಿಸಿದರು.

ಇದರೊಂದಿಗೆ ಸದರಿ ಮೊಕದ್ದಮೆಗೆ ಸಂಬಂಧಿಸಿದ ಪ್ರಕರಣ ಕುರಿತು ಜನಪ್ರತಿನಿಧಿಗಳ ನ್ಯಾಯಾಲಯವು ಹೈಕೋರ್ಟ್‌ನ ತೀರ್ಪು ಬರುವವರೆಗೆ ಯಾವುದೇ ಆದೇಶ ನೀಡುವಂತಿಲ್ಲ. ರಾಜಭವನದ ವಿಶೇಷ ಕಾರ್ಯದರ್ಶಿ ಪರ ಹಿರಿಯ ನ್ಯಾಯವಾದಿ ಹಾಗೂ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ಮುಖ್ಯಮಂತ್ರಿ ವಿರುದ್ಧದ ದೂರುದಾರರ ಪರ ಹಿರಿಯ ನ್ಯಾಯವಾದಿಗಳಾದ ಮಣಿಂದರ್ ಸಿಂಗ್, ಪ್ರಭುಲಿಂಗ ನಾವಡಗಿ ಹಾಗೂ ರಂಗನಾಥ ರೆಡ್ಡಿ ವಾದ ಮಂಡಿಸಿದರು.

ಮುಖ್ಯಮಂತ್ರಿ ಪರ (2ನೇ ಪುಟಕ್ಕೆ)

## ಆಗಸ್ಟ್‌ನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

### ಜಿಲ್ಲೆಯಲ್ಲಿ 72% ಹೆಚ್ಚಿನ ಮಳೆ, ಮಳೆಯಲ್ಲಿ ಎಲ್ಲ ತಾಲ್ಲೂಕು ಹಿಂದಾಕಿದ ಜಗಳೂರು



ದಾವಣಗೆರೆ, ಆ. 31 – ಜಿಲ್ಲೆಯಲ್ಲಿ ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಶೇ.72ರಷ್ಟು ಹೆಚ್ಚಿನ ಮಳೆಯಾಗಿದೆ. ಜಿಲ್ಲೆಯಲ್ಲಿ ಆಗಸ್ಟ್ ತಿಂಗಳ ವಾಡಿಕೆ ಮಳೆ ಪ್ರಮಾಣ 98.9 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 170 ಮಿ.ಮೀ. ಮಳೆಯಾಗಿದೆ.

ಆದರೂ, ನ್ಯಾಮತಿ ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.11ರಷ್ಟು ಕಡಿಮೆ ಮಳೆಯಾಗಿದೆ. ತಾಲ್ಲೂಕಿನಲ್ಲಿ ವಾಡಿಕೆ ಮಳೆ ಪ್ರಮಾಣ 136.4 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 121.4 ಮಿ.ಮೀ. ಮಳೆ ಸುರಿದಿದೆ.

ಜಗಳೂರಿನಲ್ಲಿ ವಾಡಿಕೆಗಿಂತ ಶೇ.252.2ರಷ್ಟು ಹೆಚ್ಚು ಮಳೆಯಾಗಿದೆ. ಜಗಳೂರಿನಲ್ಲಿ ವಾಡಿಕೆ ಮಳೆ ಪ್ರಮಾಣ 69.7 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 252.2 ಮಿ.ಮೀ. ಮಳೆ ಸುರಿದಿದೆ. ಬರದ ನಾಡು ಎನಿಸಿಕೊಂಡ ಜಗಳೂರಿನಲ್ಲೇ, ಆಗಸ್ಟ್ ತಿಂಗಳಲ್ಲಿ ಉಳಿದ ಎಲ್ಲಾ ತಾಲ್ಲೂಕುಗಳಿಗಿಂತ ಹೆಚ್ಚು ಮಳೆಯಾಗಿರುವುದು ವಿಶೇಷ.

ಚನ್ನಗಿರಿಯಲ್ಲಿ ವಾಡಿಕೆ ಮಳೆಯಾಗಿದೆ. ಇಲ್ಲಿ ವಾಡಿಕೆ ಮಳೆ ಪ್ರಮಾಣ 140.5 ಮಿ.ಮೀ. ಆಗಿದ್ದರೆ, ವಾಸ್ತವಿಕ ಮಳೆಯೂ ಅಷ್ಟೇ ಆಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 92.5 ಮಿ.ಮೀ. ವಾಡಿಕೆ ಮಳೆಯ ಬದಲು 190.1 ಮಿಮೀ. ಮಳೆಯಾಗಿದೆ. ಒಟ್ಟಾರೆ ಶೇ.106ರಷ್ಟು ಹೆಚ್ಚು ಮಳೆಯಾಗಿದೆ.

ಹರಿಹರದಲ್ಲಿ 81.2 ಮೀ.ಮೀ. ವಾಡಿಕೆ ಮಳೆಯಾಗಿದ್ದರೆ, ವಾಸ್ತವಿಕವಾಗಿ 119.8 ಮಿ.ಮೀ. ಮಳೆಯಾಗಿದೆ. ಶೇ.48ರಷ್ಟು ಹೆಚ್ಚು ಮಳೆಯಾಗಿದೆ.

#### ದೇಶದಲ್ಲಿ ಶೇ.16ರಷ್ಟು ಹೆಚ್ಚು ಮಳೆ

**ನವದೆಹಲಿ, ಆ. 31 - ದೇಶದಲ್ಲಿ ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಶೇ. 16ರಷ್ಟು ಹೆಚ್ಚು ಮಳೆಯಾಗಿದೆ. ಈ ತಿಂಗಳಲ್ಲಿ ದೇಶದ ವಾಯುವ್ಯ ಭಾಗದಲ್ಲಿ 253.9 ಮಿ.ಮೀ. ಮಳೆಯಾಗಿದ್ದು ಇದು 2001 ರ ನಂತರ ಅತಿ ಹೆಚ್ಚಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಹವಾಮಾನ ಇಲಾಖೆ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ, ಆಗಸ್ಟ್ ತಿಂಗಳಲ್ಲಿ ದೇಶದಲ್ಲಿ 287.1 ಮಿ.ಮೀ. ಮಳೆಯಾಗಿದೆ. ವಾಡಿಕೆ ಮಳೆಯ ಪ್ರಮಾಣ 248.1 ಮಿ.ಮೀ. ಎಂದು ತಿಳಿಸಿದರು. ಒಟ್ಟಾರೆ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ.**

**ಹಿಮಾಲಯ ಹಾಗೂ ಈಶಾನ್ಯದ ಹಲವು ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ವಾಯುಭಾರ ಕುಸಿತ ವ್ಯವಸ್ಥೆ ಈ ಬಾರಿ ದಕ್ಷಿಣಕ್ಕೆ ಸರಿದಿದ್ದು ಇದಕ್ಕೆ ಕಾರಣವಾಗಿದೆ ಎಂದವರು ಹೇಳಿದರು.**

#### ಸೆಪ್ಟೆಂಬರ್‌ನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯ ಮುನ್ಸೂಚನೆ

**ನವದೆಹಲಿ, ಆ. 31 - ಸೆಪ್ಟೆಂಬರ್ ತಿಂಗಳಲ್ಲಿ ದೇಶದಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗಲಿದೆ. ವಾಯುವ್ಯ ಭಾರತದಲ್ಲಿ ವಾಡಿಕೆಗಿಂತ ಅತಿ ಹೆಚ್ಚು ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರಾಖಂಡ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ರಾಜಸ್ಥಾನ ಹಾಗೂ ಮಧ್ಯಪ್ರದೇಶಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗಲಿದೆ. ದೇಶದ ಉಳಿದೆಲ್ಲ ಕಡೆ ಮಳೆಯ ಪ್ರಮಾಣ ವಾಡಿಕೆಯಂತೆ ಇರಲಿದೆ ಎಂದು ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ, ಹೇಳಿದ್ದಾರೆ.**

ಹೊನ್ನಾಳಿಯಲ್ಲಿ ವಾಡಿಕೆ ಮಳೆ ಪ್ರಮಾಣ 81.7 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 128.3 ಮಿ.ಮೀ. ಮಳೆಯಾಗಿದೆ. ತಾಲ್ಲೂಕಿನಲ್ಲಿ ಶೇ.57ರಷ್ಟು ಹೆಚ್ಚು ಮಳೆಯಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಅವಧಿಯಿಂದ ಇದುವರೆಗೂ ಶೇ.56ರಷ್ಟು ಹೆಚ್ಚು ಮಳೆಯಾಗಿದೆ. ಜೂನ್ 1ರಿಂದ ಆಗಸ್ಟ್ 31ರವರೆಗೆ ವಾಡಿಕೆ ಮಳೆ ಪ್ರಮಾಣ 285 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 445 ಮಿ.ಮೀ. ಮಳೆ ಸುರಿದಿದೆ.

## 11 ಕೋಟಿ ರೂ. ಐಫೋನ್ ಕಳ್ಳತನ ಪೊಲೀಸರ ವಿರುದ್ಧ ಕ್ರಮ

ಸಾಗರ್, ಆ. 31 - ಮಧ್ಯಪ್ರದೇಶದ ಸಾಗರ್ ಎಂಬಲ್ಲಿ ಲಾರಿಯೊಂದರಿಂದ 11 ಕೋಟಿ ರೂಪಾಯಿಗಳ 1,500 ಐಫೋನ್‌ಗಳನ್ನು ಲೂಟಿ ಮಾಡಲಾಗಿದೆ.

ಈ ಪ್ರಕರಣದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಪೊಲೀಸ್ ಒಬ್ಬರನ್ನು ಅಮಾನತುಗೊಳಿಸಲಾಗಿದೆ ಹಾಗೂ ಇನ್ನಿಬ್ಬರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ.

ಲಾರಿಯ ಚಾಲಕನಿಗೆ ಮತ್ತು ಬರಿಸಿ ಕಟ್ಟಿಹಾಕಲಾಗಿತ್ತು. ನಂತರ ಮೊಬೈಲ್‌ಗಳನ್ನು ಲೂಟಿ ಮಾಡಲಾಗಿತ್ತು. ಈ ಲಾರಿಯು ಹರಿಯಾಣದಿಂದ (5ನೇ ಪುಟಕ್ಕೆ)

## ಶಾಲೆ ಬಿಟ್ಟ ಮಕ್ಕಳ ವಿವರ ಕೊಡದಿದ್ದರೆ ಪ್ರಕರಣ ದಾಖಲಿಸಿ

### ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣಾ ಎಂ.ಕೊಳ್ಳ ಸೂಚನೆ



ದಾವಣಗೆರೆ, ಆ.31- ಪ್ರತಿ ಇಲಾಖೆಯೂ ಸಮನ್ವಯತೆಯಿಂದ ಕೆಲಸ ಮಾಡಿದಾಗ ಮಾತ್ರ ಬಾಲ್ಯ ವಿವಾಹ ನಿಯಂತ್ರಣ ಸಾಧ್ಯವಾಗಲಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಅಪರ್ಣಾ ಎಂ. ಕೊಳ್ಳ ತಿಳಿಸಿದರು.

ಶನಿವಾರ ವಿವಿಧ ಅಂಗನವಾಡಿ ಕೇಂದ್ರಗಳು, ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ನಂತರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳೊಂದಿಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಏಪ್ರಿಲ್‌ನಿಂದ ಆಗಸ್ಟ್‌ವರೆಗೆ 35 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿದೆ. ಇದರಲ್ಲಿ ಮಕ್ಕಳ ರಕ್ಷಣಾ ಘಟಕದಿಂದ 32 ವಿವಾಹಗಳನ್ನು ತಡೆಗಟ್ಟಲಾಗಿದೆ. 2 ಕ್ಕೆ ತಡೆ ತರಲಾಗಿದ್ದು 3 ಬಾಲ್ಯ ವಿವಾಹಗಳು ನಡೆದಿವೆ. ಅವರ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮಾಹಿತಿ ನೀಡಿದರು.

ಈ ವೇಳೆ ಸದಸ್ಯರು ಮಾತನಾಡಿ, ಬಾಲ್ಯ ವಿವಾಹಗಳು ನಡೆಯದಂತೆ ನೋಡಿಕೊಳ್ಳಬೇಕು, ಶಾಲೆ ಬಿಟ್ಟ ಮಕ್ಕಳ ಬಗ್ಗೆ ನಿಖರವಾದ ಅಂಕಿ ಅಂಶಗಳಿದ್ದಲ್ಲಿ ಇವೆಲ್ಲವನ್ನು ತಡೆಗಟ್ಟಬಹುದಾಗಿದ್ದು, ಶಿಕ್ಷಣ ಇಲಾಖೆಯಲ್ಲಿ ನಿಖರವಾದ ಮಾಹಿತಿ ಲಭ್ಯವಾಗಬೇಕು. ಶಾಲೆ ಬಿಟ್ಟ ಮಕ್ಕಳ ವಿವರವನ್ನು ವರದಿ ಮಾಡದ ಶಾಲಾ ಮುಖ್ಯಸ್ಥರ ಮೇಲೆ ಪ್ರಕರಣ ದಾಖಲು ಮಾಡುವ ಎಚ್ಚರಿಕೆಯನ್ನು ನೀಡಲು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕರಿಗೆ ತಿಳಿಸಿದರು.

ಬಾಲ್ಯ ವಿವಾಹ ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜೊತೆಗೆ ಇತರೆ 10 ಇಲಾಖೆಗಳ ಪಾತ್ರ ಇದ್ದು ಎಲ್ಲಾ ಇಲಾಖೆಗಳ ಜವಾಬ್ದಾರಿಯಾಗಿದೆ. ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕಾಗುತ್ತದೆ. ಮಕ್ಕಳಿಗೆ ಕಡ್ಡಾಯ ಶಿಕ್ಷಣ ಸಿಗಬೇಕು, ಬಾಲ ಕಾರ್ಮಿಕ ಪದ್ಧತಿ ನಿಷೇಧ, ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಬೇಕಾಗಿದೆ. (2ನೇ ಪುಟಕ್ಕೆ)

## ಗ್ಯಾರಂಟಿಗೆ ಇಲ್ಲದ ಆಕ್ಷೇಪ ಚುನವಣಾ ಪ್ರಣಾಳಿಕೆಗೇಕೆ ?



ದಾವಣಗೆರೆ, ಆ. 31 - ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಐದು ಗ್ಯಾರಂಟಿಗಳನ್ನು ಜಾರಿಗೆ ತರುವುದಾಗಿ ಹೇಳಿದ್ದೆವು. ಆಗ ಗ್ಯಾರಂಟಿಗಳಿಗೆ ಆಕ್ಷೇಪಿಸಿದವರು, ಕಾಂಗ್ರೆಸ್‌ನ ಲೋಕಸಭಾ ಚುನಾವಣಾ ಪ್ರಣಾಳಿಕೆಗೆ ಏಕೆ ಆಕ್ಷೇಪಿಸುತ್ತಿದ್ದಾರೆ? ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನಿಸಿದ್ದಾರೆ.

ಲೋಕಸಭಾ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಜನರಿಗೆ ಆಮಿಷ ಒಡ್ಡಲಾಗಿದೆ ಎಂದು ಬಿಜೆಪಿ ಪರಾಜಿತ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿರುವ ಬಗ್ಗೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ಕಾಂಗ್ರೆಸ್ (2ನೇ ಪುಟಕ್ಕೆ)






## ಮಹಿಳಾ ದೌರ್ಜನ್ಯ ಪ್ರಕರಣದಲ್ಲಿ ತ್ವರಿತ ನ್ಯಾಯ : ಪ್ರಧಾನಿ ಕರೆ

ನವದೆಹಲಿ, ಆ. 31 - ಮಹಿಳೆಯರ ವಿರುದ್ಧ ನಡೆಯುವ ಅಪರಾಧ ಪ್ರಕರಣಗಳಲ್ಲಿ ತ್ವರಿತ ನ್ಯಾಯ ಒದಗಿಸುವ ಅಗತ್ಯವಿದೆ. ಇದರಿಂದ ಮಹಿಳೆಯರಿಗೆ ಹೆಚ್ಚು ಸುರಕ್ಷತೆಯ ಭರವಸೆ ದೊರೆಯಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ನ್ಯಾಯಾಂಗವನ್ನು ಸಂವಿಧಾನದ ರಕ್ಷಕ ಎಂದು ಭಾವಿಸಲಾಗುತ್ತದೆ. ಸುಪ್ರೀಂ ಕೋರ್ಟ್ ಹಾಗೂ ನ್ಯಾಯಾಲಯಗಳು ಈ ಹೊಣೆಗಾರಿಕೆಯನ್ನು ನಿಭಾಯಿಸಿವೆ ಎಂದು ಮೋದಿ ಹೇಳಿದರು.

ಜಿಲ್ಲಾ ನ್ಯಾಯಾಲಯಗಳ ರಾಷ್ಟ್ರೀಯ ಸಮಾವೇಶ ಉದ್ಘಾಟಿಸಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಮಕ್ಕಳ ಸುರಕ್ಷತೆ ಜ್ವಲಂತ ವಿಷಯಗಳಾಗಿವೆ. ಇದು ಗಂಭೀರ ಕಳವಳದ ವಿಷಯ ಎಂದು ಹೇಳಿದರು.

ಮಹಿಳೆಯರ ಸುರಕ್ಷತೆ ಕುರಿತು ಕಠಿಣ (5ನೇ ಪುಟಕ್ಕೆ)


## ಕೊವಿಡ್ ಭ್ರಷ್ಟಾಚಾರ : ಸರ್ಕಾರಕ್ಕೆ ತನಿಖಾ ಆಯೋಗದ ವರದಿ ಸಲ್ಲಿಕೆ

ಬೆಂಗಳೂರು, ಆ. 31 - ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆಗೆ ರಚಿಸಲಾಗಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹಾ ನೇತೃತ್ವದ ವಿಚಾರಣಾ ಆಯೋಗ ತನ್ನ ತನಿಖಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದೆ.

ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಇತರ ಇಲಾಖೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಔಷಧ, ಆಮ್ಲಜನಕ ಉಪಕರಣಗಳು, (3ನೇ ಪುಟಕ್ಕೆ)


॥ ಶ್ರೀ ಗುರು ಬಸವ ಲಿಂಗಾಯ ನಮಃ ॥

**ಹದಿಮೂರನೇ ವರ್ಷದ ಪುಣ್ಯಸ್ಮರಣೆ**



**ಲಿಂ॥ ಶರಣ ಕೆ.ಎಂ. ಕೊಟ್ರೇಶಪ್ಪನವರು**

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು
ಬಿ.ಕಲಪನಹಳ್ಳಿ
ನಿಧನ : 01.09.2011

ನೀವು ನಮ್ಮನ್ನಗಲಿ ಹದಿಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶರಣೆ ಶರಣಮ್ಮನವರು
ಶರಣೆ ನಾಗರತ್ನ ಡಾ॥ ಎಂ. ಕೆ. ನಾಗಭೂಷಣ
ಚಿ॥ ಎಂ.ಎನ್. ಚಿನ್ಮಯ್, ಚಿ॥ ಎಂ.ಎನ್.ರಕ್ಷಿತ್
ಶರಣೆ ಕವಿತ ಡಾ॥ ಕೆ.ಎಂ. ಮಹಾಲಿಂಗಪ್ಪ,
ಚಿ॥ ಕೆ.ಎಂ. ಶಿವ ಪ್ರಸಾದ್, ಚಿ॥ ಕೆ.ಎಂ. ತಷನ್
ಲಿಂ॥ ನಾಗಮ್ಮ ಮತ್ತು ಲಿಂ॥ ಕೆ.ಎಂ. ಮಹಾಲಿಂಗಪ್ಪನವರ ಮಕ್ಕಳು, ಮೊಮ್ಮಕ್ಕಳು, ಬಿ.ಕಲಪನಹಳ್ಳಿ.

# ಅಂಗಡಿ ಪರವಾನಗಿ ಅಮಾನತ್ತು



**(1ನೇ ಪುಟದಿಂದ)** ಎಷ್ಟು ಆಹಾರ ಧಾನ್ಯ ನೀಡುತ್ತಿದ್ದಾರೆ ಎಂದು ಮಾಹಿತಿ ಪಡೆದುಕೊಂಡರು. ಮಹಿಳೆ ಮೂರು ಕೆ.ಜಿ. ಅಕ್ಕಿ ಹಾಗೂ 2 ಕೆ.ಜಿ ರಾಗಿ ಪಡೆಯಲಾಗಿದೆ ಎಂದಾಗ ತೂಕದ ನಿಖರತೆ ಪರೀಕ್ಷೆ ಮಾಡಲು ಮರು ತೂಕ ಮಾಡಲು ತಿಳಿಸಿದರು.

ಒಟ್ಟು ಆಹಾರ ಧಾನ್ಯ ಐದು ಕೆಜಿ ನೀಡಬೇಕಿದ್ದು ಇದು 4 ಕೆಜಿ 300 ಗ್ರಾಂ ತೂಕ ಮಾತ್ರ ಬಂದಿದೆ. ಪಡಿತರರಿಗೆ 700 ಗ್ರಾಂ ತೂಕದಲ್ಲಿ ಮೋಸ ಮಾಡಲಾಗಿದೆ ಎಂದು ಅರಿತ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಸ್ಥಳದಲ್ಲಿಯೇ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ ಈ ನ್ಯಾಯಬೆಲೆ ಅಂಗಡಿಯನ್ನು ಅಮಾನತ್ತು ಮಾಡಲು ಸೂಚನೆ ನೀಡಿದರು.

ಈ ವೇಳೆ ಹೊನ್ನಾಳಿ ಉಪವಿಭಾಗಾಧಿಕಾರಿ ಅಭಿಷೇಕ್ ಹಾಗೂ ತಹಶೀಲ್ದಾರ್ ಉಪಸ್ಥಿತರಿದ್ದರು.

# ಮಹಿಳೆಯರ ಆರ್ಥಿಕ ಸಬಲತೆಗೆ ಸ್ವ-ಸಹಾಯ ಸಂಘ ಸಹಕಾರಿ

## ಹರಿಹರದ ಯೂನಿಯನ್ ಬ್ಯಾಂಕ್ ಕಾರ್ಯಕ್ರಮದಲ್ಲಿ ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ

ಹರಿಹರ, ಆ,31- ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗಿ ಸ್ವಾವಲಂಬಿ ಜೀವನ ಸಾಗಿಸಲು ಸ್ವ-ಸಹಾಯ ಸಂಘಗಳು ಸಹಕಾರಿಯಾಗಿವೆ ಎಂದು ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಹೇಳಿದರು.

ನಗರದ ತಾಲ್ಲೂಕು ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಯೂನಿಯನ್ ಬ್ಯಾಂಕ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಹಿಳೆಯರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅದರಲ್ಲಿ ಸ್ವ ಸಹಾಯ ಸಂಘದವರಿಗೆ ಸಬ್ಸಿಡಿ ರೂಪದಲ್ಲಿ ಸಾಲವನ್ನು ನೀಡುತ್ತಿದ್ದು, ಹರಿಹರ ನಗರಸಭೆ 11ನೇ ಸ್ಥಾನ ಗಳಿಸಿ, ಸ್ವ- ಸಹಾಯ ಸಂಘದ ಪ್ರಶಸ್ತಿಯನ್ನು ಪಡೆದಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ಹೇಳಿದರು.

ಪ್ರಾದೇಶಿಕ ಕಾರ್ಯನಿರ್ವಾಹಕ ಎಸ್. ವೀರಣ್ಣ ಶಿವಮೊಗ್ಗ ಮಾತನಾಡಿ, ಯೂನಿಯನ್ ಬ್ಯಾಂಕ್ ನಲ್ಲಿ ಮಹಿಳೆಯರಿಗೆ ಸಾಕಷ್ಟು ಯೋಜನೆಗಳಿದ್ದು, 30 ಬಗೆಯಲ್ಲಿ ಸಾಲವನ್ನು ಅವರ ಚಟುವಟಿಕೆ ಆಧಾರದ ಅಡಿಯಲ್ಲಿ ನೀಡಲಾಗುತ್ತಿದೆ. ಸ್ವ-ಸಹಾಯ ಸಂಘದ ವತಿಯಿಂದ ಸಾಲವನ್ನು ಪಡೆದುಕೊಂಡ ಗ್ರಾಹಕರು ಶೇ. 90ರಷ್ಟು ಸರಿಯಾದ ಸಮಯಕ್ಕೆ ಮರುಪಾವತಿ ಮಾಡಿದ್ದರಿಂದ ಹೊಸ ಬಗೆಯ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸರ್ಕಾರ ಮುಂದಾಗಿದೆ. ಇದರಲ್ಲಿ 1 ಲಕ್ಷ ರೂಪಾಯಿಯಿಂದ 20 ಲಕ್ಷ ರೂಪಾಯಿ ಸಾಲವನ್ನು ಪಡೆಯುವ ಅವಕಾಶ ಇದೆ ಎಂದು ಹೇಳಿದರು.



ನಗರಸಭೆ ಸಿಎಓ, ಎನ್‌ಆರ್‌ಎಂಎಲ್ ಯೋಜನೆ ಜಗದೀಶ್ ಮಾತನಾಡಿ, ಮಹಿಳೆಯರು ಸ್ವಯಂ ಉದ್ಯೋಗ ಮಾಡುವುದಕ್ಕೆ ಸಾಲದ ಸೌಲಭ್ಯಗಳು ಇರುತ್ತವೆ. ಇದರಲ್ಲಿ ಕುರಿ ಸಾಕಾಣಿಕೆ, ಹಸು ಸಾಕಾಣಿಕೆ, ಬ್ಯೂಟಿಷಿಯನ್ ಸೇರಿದಂತೆ ಹಲವು ಯೋಜನೆಗಳಿವೆ. ಶೇ. 5 ರಷ್ಟು ಬಡ್ಡಿ ದರದ ಪ್ರೋತ್ಸಾಹ ಧನವನ್ನು ನೀಡುವುದರಿಂದ ಗ್ರಾಹಕರಿಗೆ ಶೇ. 7 ರಷ್ಟು ಬಡ್ಡಿ ಕಡಿಮೆ ಪ್ರಮಾಣದಲ್ಲಿ ಸಾಲವನ್ನು ಪಡೆಯುವ ಅವಕಾಶ ದೊರೆಯುತ್ತದೆ ಎಂದು ಹೇಳಿದರು.

ನಂದಿನಿ ಆರ್.ಡಿ.ಓ ಕೋ-ಆರ್ಡಿನೇಟರ್ ಸಾರಥಿ ಮಾತನಾಡಿ, ಸ್ವ ಸಹಾಯ ಸಂಘದ ವತಿಯಿಂದ ಕಳೆದ ಹಲವು ವರ್ಷಗಳಿಂದ 65 ಲಕ್ಷ ರೂಪಾಯಿ ಸಾಲವನ್ನು ನೀಡಲಾಗಿತ್ತು. ಆದರೆ ಈಗ 3.5 ಕೋಟಿ ರೂಪಾಯಿಗೆ ಏರಿಕೆಯಾಗಿದೆ. ಸಾಲ ಪಡೆದವರು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಿರುವುದೇ ಇದಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಈ ವೇಳೆ ಎನ್ ಆರ್.ಎಂ. ಎಲ್. ಕ್ಲಸ್ಟರ್ ಅಧಿಕಾರಿ ಸಾವಿತ್ರಮ್ಮ ಎನ್. ಹರಿಹರ ಯೂನಿಯನ್ ಬ್ಯಾಂಕ್ ಬ್ರಾಂಚ್ ಮ್ಯಾನೇಜರ್ ದೇವಿ ಪ್ರಸಾದ್ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜು ಪಾಂಡಿಯನ್ ಸಾರಥಿ, ಪದ್ಮಶ್ರೀ ಎಫ್.ಇ.ಓ. ನಿಂಗರಾಜ್ ನೋಟದವರ್, ಕರಿಯಪ್ಪ, ವೀಣಾ, ಮಮತಾ, ಲತಾ ಚಂದ್ರು, ಸಿದ್ದಾರ್ಥ ಇತರರು ಹಾಜರಿದ್ದರು.

# ತುರ್ತು ಪರಿಸ್ಥಿತಿ ಹಿನ್ನೆಲೆಯಲ್ಲಿ ಸರ್ಕಾರ ದುರುದ್ದೇಶದಿಂದ ನೋಟಿಸ್ ನೀಡಿತ್ತು ಎಂದ ಹೈಕೋರ್ಟ್

## ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್‌ಗೆ ನೀಡಿದ್ದ ನೋಟಿಸ್ 37 ವರ್ಷಗಳ ನಂತರ ರದ್ದು

ನವದೆಹಲಿ, ಆ. 31 - ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್‌ಗೆ ನೀಡಲಾಗಿದ್ದ ಬಹದ್ದೂರ್ ಷಾ ಜಫರ್ ಷಾ ಮಾರ್ಗ್‌ನಲ್ಲಿನ ಎಕ್ಸ್‌ಪ್ರೆಸ್ ಬಿಲ್ಡಿಂಗ್ ಗುತ್ತಿಗೆಯನ್ನು ರದ್ದುಗೊಳಿಸುವ ಕೇಂದ್ರ ಸರ್ಕಾರದ ನೋಟಿಸ್ ಅನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿದೆ.

ಈ ಕಟ್ಟಡವನ್ನು ಎಕ್ಸ್‌ಪ್ರೆಸ್ ಮಾಧ್ಯಮ ತೆರವುಗೊಳಿಸಬೇಕು ಎಂದು 37 ವರ್ಷಗಳ ಹಿಂದೆ ನೀಡಲಾಗಿದ್ದ ನೋಟಿಸ್ ಅನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿದೆ. ಈ ನೋಟಿಸ್ ನಿರಂಕುಶ ಹಾಗೂ ದುರುದ್ದೇಶದ್ದು ಎಂದು ಹೈಕೋರ್ಟ್ ಹೇಳಿದೆ.

ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ಸ್ ಆದಾಯ ಕರಗುವಂತೆ ಮಾಡಿ, ಈ ಮಾಧ್ಯಮವನ್ನು ಸಂಕಷ್ಟಕ್ಕೆ ದೂಡಲು ಸರ್ಕಾರ ಪ್ರಯತ್ನ ನಡೆಸಿತ್ತು ಎಂದು ಹೈಕೋರ್ಟ್ ಹೇಳಿದೆ.

ಆದರೆ ಪರಿವರ್ತನಾ ಶುಲ್ಕ ಹಾಗೂ ನೆಲ ಬಾಡಿಗೆ ರೂಪದಲ್ಲಿ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ಸ್ 64 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರಕ್ಕೆ ಪಾವತಿಸಬೇಕು ಎಂದು ಹೈಕೋರ್ಟ್ ಹೇಳಿದೆ.

1958 ರಲ್ಲಿ ಎಕ್ಸ್‌ಪ್ರೆಸ್ ಬಿಲ್ಡಿಂಗ್ ಗುತ್ತಿಗೆಯನ್ನು ನೀಡಲಾಗಿತ್ತು. 1987ರಲ್ಲಿ ಈ ಗುತ್ತಿಗೆ ರದ್ದುಗೊಳಿಸುವ ನೋಟಿಸ್ ಕಳಿಸಲಾಗಿತ್ತು.

ನೋಟಿಸ್ ಕಳಿಸಿದ ಸಂದರ್ಭದಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು.

ಎಕ್ಸ್‌ಪ್ರೆಸ್ ಬಿಲ್ಡಿಂಗ್ ತನ್ನ ಸ್ವಾಧೀನಕ್ಕೆ ನೀಡುವ ಜೊತೆಗೆ ಮಾಧ್ಯಮ ಸಂಸ್ಥೆಯು 17,500 ಕೋಟಿ ರೂ.ಗಳನ್ನು ಪಾವತಿಸಬೇಕು ಎಂದು ಕೇಂದ್ರ ಸರ್ಕಾರ ಹೇಳಿತ್ತು. ನಂತರ ಈ ಬೇಡಿಕೆಯನ್ನು 765 ಕೋಟಿ ರೂಪಾಯಿಗಳಿಗೆ ಇಳಿಸಲಾಗಿತ್ತು. ಇದರ ವಿರುದ್ಧ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ಸ್ ನ್ಯಾಯಾಲಯದ ಮೊರೆ ಹೋಗಿತ್ತು.

ಈ ಬಗ್ಗೆ 118 ಪುಟಗಳ ತೀರ್ಪು ನೀಡಿರುವ ಹೈಕೋರ್ಟ್ ನ್ಯಾಯಮೂರ್ತಿ ಪ್ರತಿಭಾ ಸಿಂಗ್, ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಲಾಗಿದೆ ಹಾಗೂ ಈ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗಿದೆ ಎಂದು ಕೇಂದ್ರ ಸರ್ಕಾರ ಮಾಡಿರುವ ಆರೋಪ ಸಾಬೀತಾಗಿಲ್ಲ ಎಂದಿದ್ದಾರೆ.

1985 ರಲ್ಲಿ ಸುಪ್ರೀಂ ಕೋರ್ಟ್ ಈ ವಿಷಯವನ್ನು ಇತ್ಯರ್ಥ ಪಡಿಸಿತ್ತು. ಆದರೆ, ಇದೇ ವಿಷಯವನ್ನು ಮುಂದಿಟ್ಟುಕೊಂಡು ಮತ್ತೆ ನೋಟಿಸ್ ಕಳಿಸಲಾಗಿದೆ ಎಂದು ಹೈಕೋರ್ಟ್ ಹೇಳಿದೆ.

ಅಲ್ಲದೇ 1987ರಲ್ಲಿ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್‌ಗೆ ನೋಟಿಸ್ ತಲುಪಿರಲಿಲ್ಲ. ಇನ್ನೊಂದು ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ನೋಡಿ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್‌ಗೆ ಮಾಹಿತಿ ತಿಳಿದಿತ್ತು ಎಂದು ನ್ಯಾಯಾಲಯ ಹೇಳಿದೆ.

1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ ಸಂದರ್ಭದಲ್ಲಿ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ ಸ್ವತಂತ್ರ ಹಾಗೂ ನ್ಯಾಯಪರತೆಯಿಂದ ವರ್ತಿಸಿತ್ತು. ಈ ಕಾರಣಕ್ಕಾಗಿ ಸರ್ಕಾರ ಹಾಗೂ ಪತ್ರಿಕೆಯ ನಡುವೆ ಸಂಘರ್ಷ ಉಂಟಾಗಿತ್ತು ಎಂದು ಹೈಕೋರ್ಟ್ ತಿಳಿಸಿದೆ.

ಮಾಧ್ಯಮ ಹಾಗೂ ಸರ್ಕಾರದ ನಡುವಿನ ಈ ಸಂಘರ್ಷ ಐದು ದಶಕಗಳದ್ದಾಗಿದೆ. ಇದು ತುರ್ತು ಪರಿಸ್ಥಿತಿ ಹಾಗೂ ನಂತರದ ಬೆಳವಣಿಗೆಗಳಿಗೆ ಸಂಬಂಧಿಸಿದೆ ಎಂದು ಹೈಕೋರ್ಟ್ ಹೇಳಿದೆ.

# 'ಜಿಲ್ಲಾ ನ್ಯಾಯಾಂಗ' ನ್ಯಾಯಿಕ ವ್ಯವಸ್ಥೆ ಬೆನ್ನು ಮೂಳೆ : ಸಿಜೆಐ

ನವದೆಹಲಿ, ಆ. 31 - ಜಿಲ್ಲಾ ನ್ಯಾಯಾಂಗವು ನ್ಯಾಯಿಕ ವ್ಯವಸ್ಥೆಯ ಬೆನ್ನು ಮೂಳೆಯಾಗಿದೆ. ಇವು ಕಾನೂನು ಆಡಳಿತದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಈ ನ್ಯಾಯಾಲಯಗಳನ್ನು ಅಧೀನ ನ್ಯಾಯಾಲಯ ಎಂದು ಹೇಳುವುದನ್ನು ನಿಲ್ಲಿಸಬೇಕು ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಜಿಲ್ಲಾ ನ್ಯಾಯಾಲಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸೇರ್ಪಡೆಯಾಗುತ್ತಿದ್ದಾರೆ ಎಂದು ಜಿಲ್ಲಾ ನ್ಯಾಯಾಲಯಗಳ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ನ್ಯಾಯಮೂರ್ತಿ ಚಂದ್ರಚೂಡ್ ತಿಳಿಸಿದರು.

ನ್ಯಾಯಾಲಯಗಳು ಮೊದಲ ಸಂಪರ್ಕ ತಾಣಗಳಾಗಿವೆ. ಇವು ಕಾನೂನು ಆಡಳಿತ ನೆಲೆಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಚಂದ್ರಚೂಡ್ ತಿಳಿಸಿದರು.

# ಜೇನುಗೂಡು ಸಮಾಜದಿಂದ ಹಿರಿಯ ನಾಗರಿಕರ ದಿನಾಚರಣೆ



ದಾವಣಗೆರೆ, ಆ. 31- ಜೇನುಗೂಡು ಮಹಿಳಾ ಸಮಾಜದಿಂದ ಹಿರಿಯ ನಾಗರಿಕರ ದಿನಾಚರಣೆ ಮತ್ತು ಗೋಕುಲಾಷ್ಟಮಿ ಆಚರಿಸಲಾಯಿತು.

ಕಾರ್ಯಕ್ರಮದ ಅತಿಥಿಯಾಗಿ ಉಪಸ್ಥಿತರಿದ್ದ ಹಿರಿಯರಾದ ಶ್ರೀಮತಿ ವಿಜಯ ಅಕ್ಕಿ ಅವರನ್ನು ಸನ್ಮಾನಿಸಲಾಯಿತು. ಸಮಾಜದ ಅಧ್ಯಕ್ಷರಾದ ಸುಜಾತ ನಾಗೇಶ್ ಅಧ್ಯಕ್ಷತೆ ವಹಿಸಿದ್ದರು.

ಜಯಶೀಲಾ ಪ್ರಾರ್ಥಿಸಿದರು. ವಿದ್ಯಾಭಾಸ್ಕರ್ ಸ್ವಾಗತಿಸಿದರು. ರೇಖಾ ಅತಿಥಿಗಳನ್ನು ಪರಿಚಯಿಸಿದರು. ಉಷಾ ಉಮೇಶ್ ನಿರೂಪಿಸಿದರು. ಮಮತಾ ಕೊಟ್ರೇಶ್ ವಂದಿಸಿದರು.

# ಮಾಂಟೆಸೋರಿಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಆ. 31- ಮಾಂಟೆಸೋರಿ ಕಾನ್ವೆಂಟ್ ಶಾಲೆಯಲ್ಲಿ ಶ್ರೀ ಕೃಷ್ಣ ಜನಾಷ್ಟಮಿ ಆಚರಿಸಲಾಯಿತು. ನರ್ಸರಿ ತರಗತಿತ ಅನೇಕ ಮಕ್ಕಳು ಶ್ರೀಕೃಷ್ಣ ಮತ್ತು ರಾಧೆಯರ ವೇಷದಲ್ಲಿ ಕಂಗೊಳಿಸಿದರು. ಶಿಕ್ಷಕಿ ರೂಪ, ಶ್ರೀಕೃಷ್ಣನ ಹುಟ್ಟು ಹಾಗೂ ಜೀವನ ವೃತ್ತಾಂತವನ್ನು ವಿವರಿಸಿದರು. ಮುಖ್ಯೋಪಾಧ್ಯಾಯರಾದ ಫರ್ಹಾನ್ ಶ್ರೀಕೃಷ್ಣನ ಆದರ್ಶಗಳನ್ನು ಅನುಸರಿಸಬೇಕಾದ ಅಗತ್ಯ ತಿಳಿಸಿದರು. ಮಕ್ಕಳು ಕೃಷ್ಣನನ್ನು ಕುರಿತು ನೃತ್ಯ ಮಾಡಿದರು. ಆಡಳಿತ ವರ್ಗ ಹಾಗೂ ಶಿಕ್ಷಕರು ಮತ್ತು ಪೋಷಕರು ಹಾಜರಿದ್ದರು.

# ಚುನಾವಣಾ ಪ್ರಣಾಳಿಕೆಗೇಕೆ ?

**(1ನೇ ಪುಟದಿಂದ)** ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಯುವಕರು, ಮಹಿಳೆಯರು ಹಾಗೂ ರೈತರಿಗೆ ನೆರವು ನೀಡಲಿದೆ ಎಂದು ಪ್ರಣಾಳಿಕೆಯಲ್ಲಿ ತಿಳಿಸಲಾಗಿತ್ತು. ನಾನು ಚುನಾವಣಾ ಸಂದರ್ಭದಲ್ಲಿ ಅದನ್ನೇ ಹೇಳಿದ್ದೆ ಎಂದರು. ರಾಜ್ಯ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಐದು ಗ್ಯಾರಂಟಿಗಳನ್ನು ಹೇಳಿಕೊಂಡೇ ಬಂದಿದ್ದೆವು. ಆಗ ಯಾರೂ ಆಕ್ಷೇಪಿಸಲಿಲ್ಲ. ಈಗ ಲೋಕಸಭಾ ಚುನಾವಣೆಯಲ್ಲಿ ಸೋತ ನಂತರ ಆಕ್ಷೇಪಿಸುತ್ತಿದ್ದಾರೆ ಎಂದರು.

ಇದೆಲ್ಲ ಸೋಲಿನ ಹತಾಶೆಯೇ ? ಎಂಬ ಪ್ರಶ್ನೆಗೆ ಉತ್ತರಿಸಿದ ಪ್ರಭಾ ಮಲ್ಲಿಕಾರ್ಜುನ್, ಹಾಗೆಂದು ನಾನು ಹೇಳುವುದಿಲ್ಲ. ಸೋಲಿನ ಹತಾಶೆಯನ್ನು ಅವರೇ ತೋರಿಸುತ್ತಿದ್ದಾರೆ ಎಂದರು.

ಈ ವಿಷಯದ ಬಗ್ಗೆ ಹೈಕೋರ್ಟ್‌ನಿಂದ ತಮಗೆ ಇನ್ನೂ ಯಾವುದೇ ನೋಟಿಸ್ ಬಂದಿಲ್ಲ. ಹೀಗಾಗಿ ಪ್ರಕರಣದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಇಷ್ಟಪಡುವುದಿಲ್ಲ ಎಂದವರು ಹೇಳಿದರು.

# ಲಯನ್ಸ್ ಪ್ರಾಂತೀಯ ಅಧ್ಯಕ್ಷರಾಗಿ ವೈ.ಬಿ. ಸತೀಶ್



ದಾವಣಗೆರೆ, ಆ.31- ಪ್ರತಿಷ್ಠಿತ ಲಯನ್ಸ್ ಪ್ರಾಂತೀಯ ಅಧ್ಯಕ್ಷರಾಗಿ ದಾವಣಗೆರೆ ಲಯನ್ಸ್ ಕ್ಲಬ್ ನಿಕಟಪೂರ್ವ ಅಧ್ಯಕ್ಷ ವೈ.ಬಿ. ಸತೀಶ್ ಅವರು ನೇಮಕಗೊಂಡಿದ್ದಾರೆ.

ಉಡುಪಿಯಲ್ಲಿ ಕಳೆದ ವಾರ ನಡೆದ ಜಿಲ್ಲಾ ಲಯನ್ಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಸತೀಶ್ ಅವರು ಪ್ರಾಂತೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.

# ನಗರಕ್ಕೆ ಇಂದು ಜಿಲ್ಲಾ ಲಯನ್ಸ್ ರಾಜ್ಯಪಾಲ ಹನೀಫ್ ಭೇಟಿ



ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ಲಯನ್ಸ್ ಪ್ರಾಂತೀಯ ಪಿಎಸ್‌ಟಿ ಸ್ಕೂಲಿಂಗ್ ಕಾರ್ಯಕ್ರಮವು ದಾವಣಗೆರೆ ಕ್ಲಬ್ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ.

**ಲಯನ್ಸ್ ಪಿಎಸ್‌ಟಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿ**

ಜಿಲ್ಲಾ ಲಯನ್ಸ್ ರಾಜ್ಯಪಾಲ ಮೊಹಮ್ಮದ್ ಹನೀಫ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಎನ್.ಎಂ. ಹೆಗಡೆ ಕಾರ್ಯಕ್ರಮವನ್ನು ನಡೆಸಿಕೊಡುವರು.

ಡಾ. ಬಿ.ಎಸ್. ನಾಗಪ್ರಕಾಶ್, ವೈ.ಬಿ. ಸತೀಶ್, ಶ್ರೀಮತಿ ಸಪ್ನ ಸುರೇಶ್, ರಾಜೀವ್ ಕೊಟ್ಯಾನ್, ಬೆಳ್ಳೂಡಿ ಶಿವಕುಮಾರ್, ಹೆಚ್.ಎನ್. ಶಿವಕುಮಾರ್, ಡಾ.ಎನ್. ಕೆ.ಭಟ್, ಕೆ. ರಮಾನಂದ್, ಎಸ್.ಜೆ. ಸತೀಶ್, ಮಹೇಶ್ ಕುಮಾರ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ಯುವಕರಲ್ಲಿ ಹೆಚ್ಚುತ್ತಿರುವ ಹೃದಯ ರೋಗ

## ಮಲೇಬೆನ್ನೂರಿನಲ್ಲಿ ಆರೋಗ್ಯ ಶಿಬಿರದಲ್ಲಿ ಡಾ. ಗುರುರಾಜ್ ಆತಂಕ



ಮಲೇಬೆನ್ನೂರು, ಆ.31- ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ದುಶ್ಚಟಗಳಿಂದ ದೂರವಿರುವುದು ಸೂಕ್ತ ಎಂದು ಎಸ್.ಎಸ್.ನಾರಾಯಣ ಆಸ್ಪತ್ರೆಯ ಹೃದಯ ರೋಗ ತಜ್ಞ ಡಾ. ಗುರುರಾಜ್ ಹೇಳಿದರು.

ಅವರು, ಶನಿವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ಎಸ್. ಎಸ್.ನಾರಾಯಣ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಹೃದಯ ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಯುವಕರು ಗುಟ್ಕಾ, ಸಿಗರೇಟ್ ಮತ್ತು ಮದ್ಯಾಪನಕ್ಕೆ ಹೆಚ್ಚು ಒಳಾಗುತ್ತಿದ್ದು, ಇದು ಅವರ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರಲಿದೆ. ಈ ಬಗ್ಗೆ ಪೋಷಕರು ನಿಗಾವಹಿಸಬೇಕೆಂದರು.

ಎದೆ ನೋವು ಬಂದಾಗ ಗ್ಯಾಸ್ಟ್ರಿಕ್ ಇರಬಹುದೆಂದು ನಿರ್ಲಕ್ಷ್ಯ ಮಾಡದೇ ತಕ್ಷಣ ಸಮೀಪದಲ್ಲಿ ಸಿಗುವ ವೈದ್ಯರನ್ನು ಭೇಟಿ ಮಾಡಿ, ತಪಾಸಣೆ ಒಳಗಾಗುವುದು ಉತ್ತಮ ಎಂ. ಡಾ. ಗುರುಬಸವರಾಜ್ ಸಲಹೆ ನೀಡಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಶ್ರೀಮತಿ ಪಾರ್ವತಮ್ಮ ಇ.ಎಂ. ಮರುಳಸಿದ್ದೇಶ್ ಅಧ್ಯಕ್ಷತೆ ವಹಿಸಿದ್ದರು.

ಆರೋಗ್ಯ ಕೇಂದ್ರದ ಡಾ. ಪ್ರಶಾಂತ್, ಲಯನ್ಸ್ ಕ್ಲಬ್ ಕಾರ್ಯದರ್ಶಿ ಶ್ರೀಮತಿ ರೂಪಾ ಪಾಟೀಲ್, ಮಾಜಿ ಅಧ್ಯಕ್ಷರಾದ ಓ.ಜಿ.ರುದ್ರಗೌಡ್ರು, ಎನ್.ಜಿ.ಬಸವನಗೌಡ, ಎನ್.ಜಿ.ಶಿವಾಜಿ ಪಾಟೀಲ್, ಎನ್.ಕೆ.ಬಸವರಾಜ್, ಎನ್. ಜಿ.ಶಿವಾಜಿ ಪಾಟೀಲ್, ಎನ್.ಕೆ.ಬಸವರಾಜ್, ಇ.ಎಂ. ಮರುಳಸಿದ್ದೇಶ್, ಚಿಟ್ಟಕ್ಕಿ ನಾಗರಾಜ್, ಸಿರಿಗೆರೆ ಸಿದ್ದಪ್ಪ, ಶ್ರೀಮತಿ ಸರೋಜಮ್ಮ ಗುರುಯ್ಯ, ಎಸ್.ಎಸ್.ನಾರಾಯಣ ಆಸ್ಪತ್ರೆಯ ಸಿಆರ್‌ಓ ಎಸ್.ಎ.ಗುಡ್ಡಪ್ಪ ಈ ವೇಳೆ ಹಾಜರಿದ್ದರು.

# ಮಕ್ಕಳ ವಿವರ ಕೊಡದಿದ್ದರೆ ಪ್ರಕರಣ ದಾಖಲಿಸಿ

**(1ನೇ ಪುಟದಿಂದ)** ಇದರಿಂದ ಮಕ್ಕಳ ಭವಿಷ್ಯ ಉತ್ತಮವಾಗಲಿದೆ ಎಂದರು.

ಆರ್.ಸಿ.ಹೆಚ್.ಪೋರ್ಟಲ್ ಅನ್ವಯ ಹದಿಹರೆಯದ ಗರ್ಭಿಣಿಯರ ವಿವರದನ್ವಯ ಜಿಲ್ಲೆಯಲ್ಲಿ 254 ಪ್ರಕರಣಗಳು ವರದಿಯಾಗಿವೆ. ಈ ಬಗ್ಗೆ ಮನೆ ಸಮೀಕ್ಷೆಯ ನಂತರ ಸಂಖ್ಯೆ 231 ಕ್ಕೆ ಇಳಿಕೆಯಾಗಿದ್ದು ಇದರಲ್ಲಿ 23 ತಾಯಂದಿರು 18 ವರ್ಷ ದಾಟಿದ್ದಾರೆ ಎಂದಾಗ ವಯಸ್ಸನ್ನು ತಿಳಿಯಲು ಆಧಾರ್ ಪರಿಗಣಿಸದೇ ಅವರ ಜನನ ಪ್ರಮಾಣ ಪತ್ರ ಪರಿಶೀಲನೆ ಮತ್ತು ಅಗತ್ಯವಿದ್ದಲ್ಲಿ ವೈದ್ಯಕೀಯ ತಪಾಸಣೆ ಮಾಡಲು ತಿಳಿಸಿ. ಇಲ್ಲಿ ಪೋಷಕರೇ ಹೇಳಿದರೂ ಸಹ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಹದಿಹರೆಯದವರು ಗರ್ಭಿಣಿಯರಾಗದಂತೆ ತಡೆಗಟ್ಟಬೇಕಾಗಿದ್ದು ಇದಕ್ಕೆ ಬೇಕಾದ ಎಲ್ಲಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದರು.

ಇಲಾಖೆಯಿಂದ ಮತ್ತು ಆಯೋಗದಿಂದ ಮಕ್ಕಳ ಬಾಲ್ಯ ವಿವಾಹ ತಡೆ, ಪೋಕ್ಸೋ ಕಾಯಿದೆ, ಬಾಲ ಕಾರ್ಮಿಕ ಪದ್ಧತಿ ನಿಷೇಧದ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಲು ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಬೇಕಾಗಿರುವುದು ಉಲ್ಲಂಘನೆ ಮಾಡುವವರ ಮೇಲೆ ಕಠಿಣ ಕ್ರಮಗಳ ಮೂಲಕ ಅನುಷ್ಠಾನವಾಗಬೇಕಾಗಿದೆ. ಕೆಲವು ಕೋಚಿಂಗ್ ಸೆಂಟರ್ ಮತ್ತು ಹಾಸ್ಟೆಲ್‌ಗಳು, ಮಕ್ಕಳ ಪಾಲನೆ ಬಗ್ಗೆ ಅನುಮತಿ ಪಡೆಯದೇ ಅನಧಿಕೃತವಾಗಿ ನಡೆಯುತ್ತಿರುವ ಸಂಸ್ಥೆಗಳ ಬಗ್ಗೆ ನಿಗಾವಹಿಸಿ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಹಾಸ್ಟೆಲ್‌ನಲ್ಲಿ ಮಕ್ಕಳಿಗೆ ಬೇಕಾದ ಸೋಪ್ ಕಿಟ್, ನ್ಯಾಪ್‌ಕಿನ್ ಸೇರಿದಂತೆ ಗುಣಮಟ್ಟದ ಆಹಾರ ಒದಗಿಸಬೇಕು ಮತ್ತು ತರಕಾರಿ, ಗುಣಮಟ್ಟದ ಬೇಳೆಕಾಳು ಒದಗಿಸಬೇಕು. ಭೇಟಿ ನೀಡಿದ ಕೆಲವು ಹಾಸ್ಟೆಲ್ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಿದ್ದು ಮಕ್ಕಳ ಆರೋಗ್ಯದ ಕಾರ್ಡ್ ಸರಿಯಾಗಿ ದಾಖಲು ಮಾಡಬೇಕು. ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಹಾಸ್ಟೆಲ್, ಅಂಗನವಾಡಿಯಲ್ಲಿನ ಮಕ್ಕಳ ಆರೋಗ್ಯ ತಪಾಸಣೆ ಮಾಡಿ ಎಲ್ಲಾ ವಿವರ ದಾಖಲು ಮಾಡಬೇಕು. ಹಾಸ್ಟೆಲ್, ಅಂಗನವಾಡಿಗಳಿಗೆ ವೈದ್ಯರು ಭೇಟಿ ನೀಡಿದ ಬಗ್ಗೆ ಸಹಿ ಮಾಡಲಾಗಿದೆ, ಆದರೆ ತಪಾಸಣೆ ಮಾಡಿದ ವಿವರಗಳನ್ನು ದಾಖಲು ಮಾಡಿರುವುದಿಲ್ಲ. ಆರೋಗ್ಯ ಇಲಾಖೆಯಿಂದ ಎಬಿಆರ್‌ಕೆಯಡಿ 300 ಶಾಲೆಗಳ ಭೇಟಿ ಇದೆ, ಶಿಕ್ಷಣ ಇಲಾಖೆ ಅಂಕಿ-ಅಂಶದಡಿ 2015 ಶಾಲೆಗಳಿದ್ದು ಒಂದೊಕ್ಕೊಂದು ತಾಳೆಯಾಗುತ್ತಿಲ್ಲ. ಇದಾಗದಂತೆ ಎಲ್ಲಾ ಶಾಲೆಗಳಲ್ಲಿ ಮಕ್ಕಳ ಆರೋಗ್ಯ ತಪಾಸಣೆ ಮಾಡಲು ತಿಳಿಸಿ. ಹಾಸ್ಟೆಲ್‌ಗಳಲ್ಲಿನ ಪ್ರತಿ ಮೂರು ತಿಂಗಳಿಗೊಮ್ಮೆ ಮಕ್ಕಳ ಆರೋಗ್ಯ ತಪಾಸಣೆ ಮಾಡಬೇಕೆಂದಿದ್ದು ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಲು ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ಮಾತನಾಡಿ, ಕೆಲವು ಶಾಲೆಗಳಲ್ಲಿ ಮಕ್ಕಳ ಟಿ.ಸಿ. ಕೊಡಲು ಸತಾಯಿಸುತ್ತಿದ್ದಾರೆ ಎಂಬ ದೂರುಗಳು ಪ್ರಾಧಿಕಾರಕ್ಕೆ ಬಂದಿವೆ, ಆನಗೋಡು ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಕ್ಕೆ ಮಕ್ಕಳು ಶಾಲೆಗೆ ಹೋಗುವ ಹಾಗೂ ಬರುವ ಸಮಯಕ್ಕೆ ಕೆಎಸ್‌ಆರ್‌ಟಿಸಿ ಯಿಂದ ಬಸ್ ಕಲ್ಪಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### ಪೋಕ್ಸೋ: 731 ಪ್ರಕರಣದಲ್ಲಿ 86ಕ್ಕೆ ಶಿಕ್ಷೆ

**ಪೋಕ್ಸೋ ಕಾಯ್ದೆಯಡಿ 2013 ರಿಂದ 2024 ರವರೆಗೆ 731 ಪ್ರಕರಣಗಳು ದಾಖಲಾಗಿದ್ದು ಇದರಲ್ಲಿ 86 ರಲ್ಲಿ ಶಿಕ್ಷೆಯಾಗಿದ್ದು 368 ಖುಲಾಸೆಯಾಗಿವೆ. 14 ಪ್ರಕರಣಗಳು ವರ್ಗಾವಣೆಗೊಂಡಿದ್ದು 11 ಸುಳ್ಳು ಪ್ರಕರಣಗಳಾಗಿವೆ. 252 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಬಾಲ ನ್ಯಾಯ ಮಂಡಳಿಯಲ್ಲಿ 2024 ರ ಏಪ್ರಿಲ್ ನಿಂದ ಜುಲೈವರೆಗೆ 60 ಬಾಕಿ ಸೇರಿ 8 ಹೊಸದಾಗಿ ಸೇರಿದಂತೆ 68 ಪ್ರಕರಣಗಳಿವೆ. ಇದರಲ್ಲಿ 15 ಇತ್ಯರ್ಥವಾಗಿದ್ದು 1 ವರ್ಷ ಮೇಲ್ಪಟ್ಟ 7 ಗಂಭೀರ ಹಾಗೂ 9 ಘೋರ ಪ್ರಕರಣಗಳಿವೆ. ವರ್ಷದೊಳಗೆ 7 ಸಣ್ಣ ಸ್ವರೂಪ, 4 ಗಂಭೀರ, 26 ಘೋರ ಸೇರಿ ಒಟ್ಟು 53 ಪ್ರಕರಣಗಳಿವೆ. ಬಾಲ ನ್ಯಾಯ ಮಂಡಳಿಯಲ್ಲಿ ಇದೇ ಅವಧಿಯಲ್ಲಿ ಬಾಕಿ 10 ಹಾಗೂ 5 ಹೊಸ ಪ್ರಕರಣ ಸೇರಿ 15 ಇದ್ದು ಇತ್ಯರ್ಥವಾಗಬೇಕಾಗಿದೆ ಎಂದು ಮಾಹಿತಿ ನೀಡಿದಾಗ, ಪ್ರಕರಣಗಳಲ್ಲಿ ತಪ್ಪಿತಸ್ಥರು ಖುಲಾಸೆಯಾಗದಂತೆ ನೋಡಿಕೊಳ್ಳಲು ಅಪರ್ಣಾ ಎಂ.ಕೊಳ್ಳ ತಿಳಿಸಿದರು.**

# ಸಿಎಂ ವಿರುದ್ಧ ಪ್ರಾಸಿಕ್ಯೂಷನ್: ವಿಚಾರಣೆ ಮುಂದಕ್ಕೆ

**(1ನೇ ಪುಟದಿಂದ)** ನ್ಯಾಯವಾದಿಗಳಾದ ಅಭಿಷೇಕ್ ಮನು ಸಿಂಘ್ವಿ, ರವಿವರ್ಮ ಕುಮಾರ್ ವಾದ ಮಂಡಿಸಿದರು.

ಸಿಂಘ್ವಿ ಅವರ ವಾದಕ್ಕೆ ಪ್ರತಿವಾದ ಮಂಡಿಸಿದ ಸಾಲಿಸಿಟರ್ ಜನರಲ್, ಸುದೀರ್ಘವಾಗಿ ಹಗರಣವನ್ನು ದಾಖಲೆಗಳ ಸಮೇತ ಎಳೆ ಎಳೆಯಾಗಿ ಬಿಡಿಸಿಟ್ಟರು.

ರಾಜ್ಯಪಾಲರು ಈ ವಿಷಯದಲ್ಲಿ ತೆಗೆದುಕೊಂಡಿರುವ ಎಲ್ಲಾ ಕ್ರಮಗಳು ಕಾನೂನಾತ್ಮಕವಾಗಿವೆ, ಅವರು ಪ್ರಕರಣದ ಆರೋಪಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡುವ ಅಗತ್ಯವೂ ಇರಲಿಲ್ಲ. ಆದರೂ ರಾಜ್ಯಪಾಲರು ವಿವರಣೆ ಕೋರಿದ್ದಾರೆ, ಇದಕ್ಕೆ ರಾಜ್ಯ ಸಚಿವ ಸಂಪುಟವೇ 91 ಪುಟಗಳ ವಿವರಣೆ ಕೊಟ್ಟಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಅವರಿಂದ ನೇಮಕಗೊಂಡ ಸಚಿವರುಗಳು, ಅವರ ವಿರುದ್ಧವೇ ಟಿಪ್ಪಣಿ ನೀಡಲು ಸಾಧ್ಯವೇ? ಸಹಜವಾಗಿ ಅವರ ಪರವಾದ ತೀರ್ಮಾನ ಕೈಗೊಂಡು ಅಡ್ವೊಕೇಟ್ ಜನರಲ್ ನೀಡಿದ ವರದಿಯನ್ನೇ ಯಥಾವತ್ತಾಗಿ ಅಂಟಿಸಿದ್ದಾರೆ ಎಂದು ಹೇಳಿದರು.

ಬೆಂಗಳೂರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದಲ್ಲೇ ಗಮನ ಸೆಳೆದ ಕೇಂದ್ರ. ಇಂತಹ ನಗರದಲ್ಲಿ ಇರುವವರು ಮಾಹಿತಿ ತಂತ್ರಜ್ಞಾನದ ಗಂಧವೇ ಇಲ್ಲದೆ ವರದಿಯನ್ನೇ ಯಥಾವತ್ತಾಗಿ ಅಂಟಿಸಿ ಕಳುಹಿಸಿದ್ದಾರೆ ಎಂದು ಹೇಳಿದರು.

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಮೊದಲು, ತಮಗೆ ಬಂದ ದೂರು, ಅದಕ್ಕೆ ಸರ್ಕಾರದ ಉತ್ತರ ಎಲ್ಲವನ್ನೂ ಕೂಲಂಕುಷವಾಗಿ ಪರಿಶೀಲಿಸಿದ ನಂತರವೇ ರಾಜ್ಯಪಾಲರು ವಿವರವಾಗಿ ದಾಖಲೆ ಸಿದ್ಧಪಡಿಸಿ, ಪ್ರಾಸಿಕ್ಯೂಷನ್‌ಗೆ ನೀಡಿದ್ದಾರೆ ಎಂದರು.

ಅದರ ಪೂರ್ಣ ವರದಿ ಲಕೋಟೆಯಲ್ಲಿ ನ್ಯಾಯಪೀಠದ ಅವಗಾಹನೆಗೆ ತಂದಿದ್ದು, ಇದು ಬಹಿರಂಗಗೊಂಡರೆ ಹಗರಣ ಮುಚ್ಚಿಹಾಕುವ ಪ್ರಯತ್ನ ನಡೆಯಬಹುದು ಎಂದು ಮೆಹ್ತ ಮನವಿ ಮಾಡಿದರು.

ಪ್ರಾಸಿಕ್ಯೂಷನ್‌ಗೆ ಅನುಮತಿ ಸಂಬಂಧ ಸಂವಿಧಾನಿಕ ಪೀಠಗಳು ನೀಡಿರುವ ತೀರ್ಪುಗಳನ್ನು ನ್ಯಾಯಾಲಯದ ಗಮನಕ್ಕೆ ತಂದ ಮೆಹ್ತ, ರಾಜ್ಯಪಾಲರ ಕಡತ ಗಮನಿಸಿದರೆ, ಅವರು ವಿವೇಚನೆ ಬಳಸಿದಂತೆ ಕಂಡುಬರುತ್ತದೆ ಎಂದು ಹೇಳಿದರು.

ಯಾವುದೇ ಆಡಳಿತಾತ್ಮಕ ಆದೇಶ ವಿವೇಚನೆಯಿಂದ ಕೂಡಿರಬೇಕು, ಆಗ, ಯಾವುದೇ ತೀರ್ಪುಗಳ ಸಮರ್ಥನೆ ಬೇಕಾಗಿಲ್ಲ ಎಂದು ಕೆಲವು ತೀರ್ಪುಗಳನ್ನು ಉದಾಹರಿಸಿದರು.

ರಾಜ್ಯಪಾಲರು ವಿವರವಾಗಿ ಸಾಕ್ಷ್ಯ ವಿಚಾರಣೆ ನಡೆಸುವಂತಿಲ್ಲ, ಅವರು ನಿಯಮ 19ರಡಿಯೂ ಅನುಮತಿ ನೀಡಿಲ್ಲ, 17ಎ ಅಡಿಯಲ್ಲಿ ಮಾತ್ರ ಅನುಮತಿ ನೀಡಿದ್ದಾರೆ, ಇದು ತನಿಖೆಗೆ ಮಾತ್ರ ನೀಡಿರುವ ಅನುಮತಿ ಎಂಬುದಾಗಿ ಪರಿಗಣಿಸಬೇಕು ಎಂದರು.

ನಿಯಮ 17ಎ ಎಲ್ಲಾ ಸಾರ್ವಜನಿಕ ಸೇವಕರಿಗೂ ಅನ್ವಯವಾಗುತ್ತದೆ ಎಂದು ಹೇಳಿ, ಇಂತಹ ಪ್ರಕರಣಗಳಿಗೆ ಸಂಬಂಧಿಸಿದ ತೀರ್ಪುಗಳನ್ನು ನ್ಯಾಯಾಲಯದ ಗಮನಕ್ಕೆ ತಂದರು.

ರಾಜ್ಯಪಾಲರು ಮುಡಾ ಬಗ್ಗೆ ತಮ್ಮ ದಾಖಲೆಯಲ್ಲಿ ಪೂರ್ಣ ಮಾಹಿತಿ ನೀಡಿದ್ದಾರೆ, 40:60 ಮತ್ತು 50:50 ಅನುಪಾತದ ನಿಯಮ ಬದಲಿಸಲಾಗಿದೆ.

ಸಿದ್ದರಾಮಯ್ಯ ಪುತ್ರ ಯತೀಂದ್ರ ಅಂದಿನ ಮುಡಾ ಸಭೆಯಲ್ಲಿ ಭಾಗವಹಿಸಿದ್ದಾರೆ. ಬಹಳ ಪ್ರತಿಷ್ಠಿತ ಬಡಾವಣೆಯಲ್ಲಿ ಬದಲಿ ನಿವೇಶನ ನೀಡಲಾಗಿದೆ. ಇಷ್ಟೆಲ್ಲಾ ವ್ಯತಿರಿಕ್ತ ಅಂಶಗಳಿದ್ದರೂ ರಾಜ್ಯ ಸಚಿವ ಸಂಪುಟ ಮುಖ್ಯಮಂತ್ರಿ ಪರ ನಿರ್ಣಯ ಕೈಗೊಂಡಿದೆ ಎಂದು ಹೇಳಿದರು.

ಇಷ್ಟೆಲ್ಲಾ ನ್ಯೂನತೆಗಳ ನಡುವೆಯೂ ಪ್ರಾಸಿಕ್ಯೂಷನ್‌ಗೆ ಅನುಮತಿ ಕುರಿತು ಸ್ವಂತ ವಿವೇಚನೆಯಿಂದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಎಂಪಿ ಪೋಲಿಸ್ ಎಸ್ಟಾಬ್ಲಿಷ್‌ಮೆಂಟ್ ಪ್ರಕರಣ ಉಲ್ಲೇಖಿಸಿದರು.

ಮುಖ್ಯಮಂತ್ರಿ ಅವರು ಮುಡಾದಲ್ಲಿ ಹಲವು ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಈ ಭೂಮಿ ದಲಿತರೊಬ್ಬರಿಗೆ ಸೇರಿದ್ದು, ಬಳಿಕ ಮುಖ್ಯಮಂತ್ರಿ ಅವರ ಸಂಬಂಧಿಕರು ಖರೀದಿ ಮಾಡಿ ಅದನ್ನು ಸಿದ್ದರಾಮಯ್ಯ ಪತ್ನಿಗೆ ದಾನ ನೀಡಿದ್ದಾರೆ. ಮುಡಾ ಸಭೆ ಈ ಎಲ್ಲ ನಿರ್ಣಯ ಕೈಗೊಳ್ಳುವಾಗ ಮುಖ್ಯಮಂತ್ರಿ ಅವರ ಪುತ್ರ ಹಾಜರಾಗಿ ಸಹಿ ಮಾಡಿರುತ್ತಾರೆ ಎಂದು ಕೋರ್ಟ್ ಗಮನಕ್ಕೆ ತಂದರು.

ಎಫ್‌ಐಆರ್ ಹಾಗೂ ಚಾರ್ಜ್‌ಶೀಟ್‌ಗೆ ಮೊದಲು ಪ್ರಾಸಿಕ್ಯೂಷನ್‌ಗೆ ಕೊಡುವ ಅವಕಾಶ ಇದೆ ಎಂದು ಕೆಲವು ದಾಖಲೆಗಳನ್ನು ನ್ಯಾಯಮೂರ್ತಿಗಳ ಗಮನಕ್ಕೆ ತಂದು, ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಸಮರ್ಥಿಸಿಕೊಂಡರು. ಅನುಮತಿ ನೀಡುವ ಮುನ್ನ ಆರೋಪಿಯ ಹೇಳಿಕೆಗಳನ್ನು ದಾಖಲಿಸಬೇಕಿಲ್ಲ ಎಂದು ಸುಪ್ರೀಂಕೋರ್ಟ್‌ನ ತೀರ್ಪುಗಳನ್ನು ಮೆಹ್ತ ಉಲ್ಲೇಖಿಸಿದರು.

# ವಾರ ಭವಿಷ್ಯ

**ದಿನಾಂಕ : 01.09.2024 ರಿಂದ 07.09.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಲು.ಲೇ.ಲೊ.ಅ.)**

ಪ್ರತಿಯೊಂದರಲ್ಲೂ ವ್ಯಾಪಾರಿ ಮನೋಭಾವ ಅಷ್ಟು ಸರಿಯಲ್ಲ, ಇದು ಇಲ್ಲಸಲ್ಲದ ಚಿಂತೆಗೆ ಕಾರಣವಾದೀತು, ಕೃಷಿಯಿಂದ ಹೆಚ್ಚಿನ ಆದಾಯವಿದ್ದರೂ ಇತರೆ ಆದಾಯದಲ್ಲಿ ತುಸು ಕಡಿತ ಕಾಣಲಿದೆ, ಉನ್ನತಾಧ್ಯಯನ ಮಾಡುತ್ತಿರುವವರಿಗೆ ಉನ್ನತ ಫಲಿತಾಂಶ ಬರಲಿದೆ. ಸಡಿಲವಾಗಿದ್ದ ಕುಟುಂಬದ ಹೊಂದಾಣಿಕೆ ಉತ್ತಮಗೊಳ್ಳಲಿದೆ. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಹೆಚ್ಚಿನ ಅನುಕೂಲಕ್ಕೆ ನರಸಿಂಹ ದೇವರನ್ನು ಆರಾಧಿಸಿರಿ. ಮಾತು ಅನ್ನದಾನ ಮಾಡಿರಿ. ಮಹಿಳೆಯರಿಗೆ ಉತ್ತಮ ದಿನಗಳು. ಸೋಮ-ಮಂಗಳ-ಗುರು-ಶುಭದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕೇವಲ ಮಾತಿನಿಂದ ಹೆಚ್ಚಿನ ಆದಾಯ ನಿರೀಕ್ಷಿಸದೇ ಅದನ್ನು ನಿಮ್ಮ ಚಟುವಟಿಕೆಯಿಂದ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ. ಹಿರಿಯರೊಂದಿಗೆ ಯಾವುದೇ ಕಾರಣಕ್ಕೂ ಮುನಿಸಿಕೊಳ್ಳಬೇಡಿ, ವೈದಿಕ ವಿದ್ಯೆ ಕಲಿಯುತ್ತಿರುವವರಿಗೆ ಸಮಾಜದಲ್ಲಿ ಉತ್ತಮ ಬೆಂಬಲ ಸಿಗಲಿದೆ, ಖ್ಯಾತ ವಿದ್ವಾಂಸರಿಗೆ ಮಠಮಾನ್ಯಗಳಿಂದ ಸನ್ಮಾನವಾಗಲಿದೆ. ಮನೆಪಾಠ ಹೇಳುವವರಿಗೆ ನಿರೀಕ್ಷಿತ ಸಂಪಾದನೆಯಾಗದೇ ಹೋಗಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆಬೇಡ, ಹೈನುಗಾರಿಕೆ ಆರಂಭಿಸುವ ಮೊದಲು ಅನುಭವಿಗಳಿಂದ ಸಲಹೆ ಪಡೆಯುವುದು ಮೇಲು. ಬುಧ-ಗುರು-ಶುಕ್ರ-ಶುಭದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಈ ವಾರ ಆದಾಯ- ವೆಚ್ಚಗಳ ವಿಷಯದಲ್ಲಿ ಹೆಚ್ಚು ಕಡಿಮೆ ಸಮಸಮ ಫಲಿತಾಂಶ ಕಂಡುಬರಲಿದೆ. ಯುವಕರು ತಮ್ಮ ಉತ್ತಮ ನಡಾವಳಿಯಿಂದ ಮಾತ್ರ ಬದುಕಿನಲ್ಲಿ ಯಶಸ್ಸು ಕಾಣಬಲ್ಲರು. ಯಾವುದೇ ಹೊಸ ಯೋಜನೆಗಳನ್ನು ಜಾರಿಗೆ ತರುವ ಪ್ರಯತ್ನ ಬೇಡ, ಆಸ್ತಿ ಖರೀದಿ ವಿಚಾರವನ್ನು ಸದ್ಯದ ಪರಿಸ್ಥಿತಿಯಲ್ಲಿ ಮುಂದೂಡುವುದು ಉತ್ತಮ, ಮಡದಿ ಮಕ್ಕಳನ್ನು ತೃಪ್ತಿಪಡಿಸಲು ಅವರ ಮೋಜು ಮಸ್ತಿಗಾಗಿ ತುಸು ಹೆಚ್ಚಿನ ಪ್ರಮಾಣದಲ್ಲಿ ಖರ್ಚು ಮಾಡಬೇಕಾದೀತು, ಸೋದರಿಯ ಮಗನಿಗೆ ವಿವಾಹ ನಿಶ್ಚಯವಾಗಲಿದೆ, ದುರ್ಗಾರಾಧನೆ ಮಾಡಿ. ಭಾನು-ಬುಧ-ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಕಾರಣಾಂತರಗಳಿಂದ ಅವ್ಯವಸ್ಥಿತಗೊಂಡಿದ್ದ ಮನಸ್ಸು ಈಗ ಸಮಚಿತ್ತತೆಗೆ ಬರಲಿದೆ. ಯುವಜನರು ಪ್ರೀತಿ-ಪ್ರೇಮಗಳ ವಿಷಯದಲ್ಲಿ ಯಶಸ್ಸು ಸಾಧಿಸುವರು. ಆದರೆ ಇದೇ ಬದುಕಿನ ಗುರಿಯಲ್ಲ ಎಂಬುದನ್ನು ನೆನಪಿಡುವುದು ಮೇಲು. ಕೃಷಿ ಮಾರಾಟದಿಂದ ಉತ್ತಮ ಆದಾಯವನ್ನು ರೈತಾಪಿ ಜನರು ನಿರೀಕ್ಷಿಸಬಹುದು. ವಿದ್ಯಾರ್ಥಿಗಳು ತಮ್ಮ ಶ್ರಮಕ್ಕೆ ತಕ್ಕಂತೆ ಫಲಿತಾಂಶ ಪಡೆಯುವರು. ಆಸ್ತಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಹಿರಿಯರ ಸಲಹೆಯಂತೆ ನಡೆದುಕೊಳ್ಳಿ. ಮಹಿಳೆಯರಿಗೆ ಉತ್ತಮ ದಿನಗಳು. ಗೋ ಸೇವೆ ಮಾಡಿರಿ. ಸೋಮ-ಬುಧ-ಶುಕ್ರ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಆದಾಯದಲ್ಲಿ ತುಸು ಕಡಿತವಿದ್ದರೂ ನೆಮ್ಮದಿಗೇನೂ ತೊಂದರೆಯಿಲ್ಲ, ವ್ಯಕ್ತಿತ್ವದಲ್ಲಿ ಗಾಂಭೀರ್ಯ ಕಂಡುಬರಲಿದೆ, ವೈಯಕ್ತಿಕ ಕೆಲಸ ಕಾರ್ಯಗಳಿಗೆ ಹಿರಿಯರ ಸಲಹೆಯಂತೆ ನಡೆದುಕೊಳ್ಳಿ. ಬರಬೇಕಾಗಿರುವ ಬಾಕಿ ಹಣವನ್ನು ಕೇಳದೇ ಕಳೆದುಕೊಳ್ಳಬೇಡಿ. ಸರ್ಕಾರೀ ನೌಕರರು ಅನಿರೀಕ್ಷಿತ ಸಂದರ್ಭವೊಂದ ರಲ್ಲಿ ವರ್ಗಾವರ್ಗಿಯಾಗುವರು, ವಿದ್ಯಾವಂತ ಪದವೀಧರರಿಗೆ ಸಾಧಾರಣ ಮಟ್ಟದ ನೌಕರಿ ದೊರೆಯಲಿದೆ. ಖಾಸಗೀ ಕಂಪನಿ ನೌಕರರು ಸಹೋದ್ಯೋಗಿಗಳೊಂದಿಗೆ ಸೌಹಾರ್ದತೆ ಕಾಪಾಡಿಕೊಳ್ಳುವುದು ಉತ್ತಮ. ಭಾನು-ಸೋಮ-ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನಿರೀಕ್ಷಿತ ಮಟ್ಟದಲ್ಲಿ ಆದಾಯವಿಲ್ಲದೇ ಹಣಕಾಸಿಗಾಗಿ ಪರದಾಡಬೇಕಾದೀತು. ಕೊಟ್ಟ ಸಾಲ ಮರಳಿ ಸಕಾಲಕ್ಕೆ ಬಾರದೇ ತೊಂದರೆ ಅನುಭವಿಸುವಿರಿ. ನಿಮ್ಮ ಕೆಲವು ಅಭಿಪ್ರಾಯಗಳಿಗೆ ಬಂಧುಗಳಿಂದಲೇ ಪ್ರತಿರೋಧ ಬರಲಿದೆ, ಆದ್ದರಿಂದ ಕೆಲವು ವಿಚಾರಗಳಲ್ಲಿ ತಟಸ್ಥರಾಗಿರುವುದು ಮೇಲು. ಮಡದಿ ಮಕ್ಕಳ ಉಡಾಫೆ ಮಾತುಗಳು ನಿಮ್ಮನ್ನು ಹತಾಶೆಗೊಳಿಸ ಬಹುದು. ಮಗನ ವಿಚಾರವಾಗಿ ವಿದೇಶ ಪ್ರಯಾಣ ಮಾಡಬೇಕಾಗಬಹುದು, ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಮಾಡುವುದು ಬೇಡ. ಗೋ ಸೇವೆ ಮಾಡಿ. ಮಂಗಳ-ಗುರು-ಶುಕ್ರ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಕೆಲವರು ನಿಮ್ಮ ಹೆಸರು ಅಥವಾ ಪ್ರಸಿದ್ಧಿಯನ್ನು ದುರುಪಯೋಗಪಡಿಸಿಕೊಳ್ಳುವರು, ಈ ವಿಚಾರದಲ್ಲಿ ತುಸು ಜಾಗ್ರತವಾಗಿರುವುದು ಮೇಲು. ಕರಿದಪದಾರ್ಥಗಳ ಅತಿ ಸೇವನೆಯಿಂದ ಚರ್ಮದಲ್ಲಿ ತುರಿಕೆ ಮೊದಲಾದ ಚರ್ಮಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು, ಸೂಕ್ತ ತಜ್ಞರನ್ನು ಕಾಣುವುದು ಮೇಲು. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರಬೇಡ.ಸೌಂದರ್ಯ ವರ್ಧಕ ಸಾಧನಗಳಿಗಾಗಿ ಹೆಚ್ಚಿನ ವೆಚ್ಚವಾಗಲಿದೆ. ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು ಸಕಾಲದಲ್ಲಿ ಆಗದೇ ಹೋಗಬಹುದು. ಗುರು-ಶುಕ್ರ-ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಆದಾಯ ಉತ್ತಮವಾಗಿದ್ದರೂ, ಅದಕ್ಕೆ ತಕ್ಕಂತೆ ವೆಚ್ಚವೂ ಇರುವುದರಿಂದ ಉಳಿತಾಯದ ಮಾತು ದೂರವಾದೀತು, ರೈತಾಪಿ ಜನರು ಹೊಸ ಜಮೀನುಕೊಳ್ಳಲು ಹರಸಾಹಸ ಪಡುವರು. ಪ್ರಾಯಕ್ಕೆ ಬಂದ ಮಕ್ಕಳಿಂದ ಅನಿರೀಕ್ಷಿತವಾಗಿ ಇಲ್ಲಸಲ್ಲದ ಮಾತುಗಳನ್ನು ಕೇಳಬೇಕಾದೀತು, ಆಹಾರ ಪದಾರ್ಥಗಳ ಮಾರಾಟದಿಂದ ಹೆಚ್ಚಿನ ಲಾಭವಾಗಲಿದೆ. ಹದಗೆಟ್ಟಿದ್ದ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡುಬರಲಿದೆ. ಕಠಿಣ ಮಾತುಗಳಿಂದ ತಾಯಿ ತುಸು ಮುನಿಸಿಕೊಳ್ಳಬಹುದು, ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ಭಾನು-ಸೋಮ-ಮಂಗಳ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಕುಸಿಯುತ್ತಿರುವ ಆದಾಯ ನಿಮ್ಮನ್ನು ದುಡಿಮೆಯತ್ತ ಒಯ್ಯಲಿದೆ, ಇದು ಒಂದು ರೀತಿಯಲ್ಲಿ ಉತ್ತಮವೆಂದೇ ಹೇಳಬಹುದು, ರಾಜಕಾರಣಿಗಳಿಗೆ ಅವರ ಹಿಂಬಾಲಕರಿಂದಾದ ಎಡವಟ್ಟಿನಿಂದಾಗಿ ಜನಪ್ರಿಯತೆ ಕಡಮೆಯಾಗಬಹುದು, ಉನ್ನತಾಧ್ಯಯನಕ್ಕೆ ಯತ್ನಿಸುವವರಿಗೆ ಸಾಮಾಜಿ ಕಬೆಂಬಲ ದೊರೆಯಲಿದೆ, ಪಾಲುದಾರಿಕೆ ವ್ಯವಹಾರದಲ್ಲಿ ಲಾಭಾಂಶ ಪಡೆಯಲು ತುಸು ಶ್ರಮ ಪಡಬೇಕಾದಿತು, ಚಿಕ್ಕಮಕ್ಕಳ ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಗಮನಕೊಡ ಬೇಕಾಗಬಹುದು. ಅಧ್ಯಾಪಕ ವರ್ಗದರಿಗೆ ಉತ್ತಮ ಆದಾಯವಾಗಲಿದೆ. ಅನ್ನದಾನ ಮಾಡುವುದು ಮೇಲು. ಬುಧ-ಗುರು-ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಇಷ್ಟುದಿನ ಕಳವಳಗೊಂಡಂತಿದ್ದ ಮನಸ್ಸಿನ ಸ್ಥಿತಿ ಈ ವಾರ ಸರಿ ಹೋಗಲಿದೆ, ಕಂಡವರ ವಿಷಯದಲ್ಲಿ ಮೂಗು ತೂರಿಸುವುದರಿಂದ ಅವಮಾನಕ್ಕೆ ಒಳಗಾಗುವಿರಿ. ಕಲಾವಿದರಿಗೆ ಸರಿಯಾದ ಸಂಭಾವನೆ ಸಿಗಲಿದೆ, ಆದಾಯದಲ್ಲಿ ಕಡಿತ ಕಂಡುಬಂದರೂ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ ರಕ್ತಸಂಬಂಧಿ ಖಾಯಿಲೆಯಿರುವವರು ತುಸು ಎಚ್ಚರದಿಂದಿರುವುದು ಮೇಲು.ಸಂಗಾತಿಯ ವೇತನದಲ್ಲಿ ಹೆಚ್ಚಳ, ವಿಚಿತ್ರವೆಂಬಂತೆ ಸರ್ಕಾರಕ್ಕೆ ಎಂದೋ ಹಾಕಿಮರೆತೇ ಹೋಗಿದ್ದ ಮನವಿಗೆ ಈಗ ಪುರಸ್ಕಾರ ದೊರೆಯಲಿದೆ. ಗುರುಗಳನ್ನು ನೆನೆಯಿರಿ. ಸೋಮ-ಗುರು-ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಧಾರ್ಮಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಮಠಮಾನ್ಯಗಳಿಂದ ಹಾಗು ಗುರುಗಳಿಂದ ಆಶೀರ್ವಾದದೊರೆಯಲಿದೆ.ಮತ್ತೊಬ್ಬರೊಂದಿಗೆ ಮಾತನಾಡುವಾಗ ತುಸು ಎಚ್ಚರದಿಂದಿರುವುದು ಮೇಲು ಬಂಧುಗಳಿಂದ ಸಕಾಲಿಕನೆರವು ದೊರೆಯಲಿದೆ ಆರ್ಥಿಕಸ್ಥಿತಿ ಮಧ್ಯಮವಾಗಿರುವುದರಿಂದ ಹೆಚ್ಚಿನ ಚಿಂತೆಬೇಡ, ವಿದ್ಯಾರ್ಥಿಗಳು ಅಧ್ಯಯನದಕಡೆ ಹೆಚ್ಚಿನ ಗಮನ ಕೊಡುವುದು ಮೇಲು ನೆಗಡಿಮೊದಲಾದ ಶೀತಬಧೆಯಿರುವವರು ತುಸು ಎಚ್ಚರದಿಂದಿರು ವುದು ಉತ್ತಮ ಕೆಲಸಕಾರ್ಯಗಳಲ್ಲಿ ಅಲಕ್ಷೆಬೇಡ. ಬುಧ-ಗುರು-ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝು.ಥ.ದೆ.ದೋ.ಖ.ಚ.ಚಿ.)**

ಪ್ರತಿಯೊಂದಕ್ಕೂ ಮೊಂಡು ಹಠ ಮಾಡದೇ ಗುರು-ಹಿರಿಯರನ್ನು ಅನುಸರಿಸಿಕೊಂಡು ಹೋಗುವುದರಲ್ಲೇ ನಿಮ್ಮ ಹಿತವಡಗಿದೆ. ಮಡದಿ ಮಕ್ಕಳು ಕೆಲವೊಮ್ಮೆ ನಿಮ್ಮ ಮಾತಿಗೆ ಪ್ರತಿಯಾಡುವರು, ಇದರಿಂದ ಮಾನಸಿಕ ಖಿನ್ನತೆ ಅನುಭವಿಸ ಬೇಕಾದಿತು, ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಕಿರಿಕಿರಿಯುಂಟಾಗ ಲಿದೆ ಮಧ್ಯಮಗತಿ ಆದಾಯವು ನಿಮ್ಮ ಇಷ್ಟಾರ್ಥಗಳನ್ನು ಪೂರೈಸದೇ ಹೋಗಬಹುದು.ಗುಪ್ತರೋಗ ಅಥವಾ ಉಸಿರಾಟದತೊಂದರೆ ಯಿರುವವರು ಸೂಕ್ತ ವೈದ್ಯರನ್ನು ಕಾಣುವುದು ಮೇಲು ಒಳಿತಿಗಾಗಿ ಲಕ್ಷ್ಮಿನಾರಾಯಣರನ್ನು ಆರಾಧಿಸಿ. ಭಾನು-ಸೋಮ-ಗುರು ಶುಭ ದಿನಗಳು.

**ವಿಶೇಷ ದಿನಗಳು :**

**ದಿನಾಂಕ: 2.9.2024 ನೇ ಸೋಮವಾರ ಬೆನಕನ ಅಮಾವಾಸ್ಯೆ**
**ದಿನಾಂಕ: 6.9.2024 ನೇ ಶುಕ್ರವಾರ ಸ್ವರ್ಣಗೌರೀ ವ್ರತ, ದಿನಾಂಕ: 7.9.2024 ನೇ ಶನಿವಾರ ವರಸಿದ್ಧಿ ವಿನಾಯಕ ವ್ರತ, ಚಂದ್ರದರ್ಶನ ನಿಷೇಧ. ದಿನಾಂಕ: 8.9.2024 ನೇ ಭಾನುವಾರ ಋಷಿಪಂಚಮೀ, ವ್ರತಗ್ರಹಣ ಮತ್ತು ಉದ್ಯಾಪನೆ ಮಾಡಬಹುದು.**

## ಶಿವ ಬ್ಯಾಂಕ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಆ. 31- ನಗರದ ಶಿವ ಸಹಕಾರಿ ಬ್ಯಾಂಕ್ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಅರ್ಹ ವಿದ್ಯಾರ್ಥಿಗಳು ಬರುವ ಸೆಪ್ಟೆಂಬರ್ 6ರೊಳಗೆ ಸಂಘದ ಆಡಳಿತ ಕಛೇರಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಸೆಪ್ಟೆಂಬರ್ 14ರ ಶನಿವಾರ ನಡೆಯಲಿರುವ ಸಂಘದ 50ನೇ ವಾರ್ಷಿಕ ಮಹಾಸಭೆಯಲ್ಲಿ ಪುರಸ್ಕಾರ ನೀಡಲಾಗುವುದು. ವಿವರಗಳಿಗೆ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು, ಶಾಖಾ ವ್ಯವಸ್ಥಾಪಕರುಗಳನ್ನು ಸಂಪರ್ಕಿಸಬಹುದಾಗಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಆಡಳಿತ ಕಛೇರಿಗೆ ಅರ್ಜಿ ಸಲ್ಲಿಸಬಹುದು.

# ಪ್ರಸ್ತುತ ಜಾಗತೀಕರಣ ವ್ಯವಸ್ಥೆಯಲ್ಲಿ ನಾವು ಗ್ರಾಹಕರಷ್ಟೇ

## ಡಿ.ರಾಮನಮಲಿ ರಚಿತ ಕೃತಿ ಬಿಡುಗಡೆ ಸಮಾರಂಭದಲ್ಲಿ ಡಾ. ಸಿದ್ದನಗೌಡ ಪಾಟೀಲ್

ಹರಪನಹಳ್ಳಿ, ಆ. 31- ಪ್ರಸ್ತುತ ಉದಾರೀಕರಣ, ನಗರೀಕರಣ ಮತ್ತು ಜಾಗತೀಕರಣದ ವ್ಯವಸ್ಥೆಯಲ್ಲಿ ನಾವು ಗ್ರಾಹಕರಾಗಿ ಮಾತ್ರ ಕಾಣುತ್ತಿದ್ದೇವೆ ಎಂದು ಬೆಂಗಳೂರಿನ 'ಹೊಸತು' ಪತ್ರಿಕೆ ಸಂಪಾದಕ ಡಾ.ಸಿದ್ದನಗೌಡ ಪಾಟೀಲ್ ಹೇಳಿದರು.

ಪಟ್ಟಣದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹೊಂಬೆಳಕು ಪ್ರಕಾಶನದ ಸಾಹಿತಿ ಡಿ. ರಾಮನಮಲಿ ಬರೆದಿರುವ 'ಐಶ್ವರ್ಯ ಎಂಬ ಆಕಳಂಕಿತರು' ಪುಸ್ತಕ ಬಿಡುಗಡೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಇವತ್ತಿನ ಶೈಕ್ಷಣಿಕ ಲೋಕದಲ್ಲಿಯೂ ನಾವೆಲ್ಲರೂ ಗ್ರಾಹಕರಾಗಿದ್ದೇವೆ. ಇವತ್ತು ಮನುಷ್ಯ ಮನುಷ್ಯನ ನಡುವೆ ಸಂಬಂಧಕ್ಕಿಂತ ವಸ್ತುಗಳ ನಡುವೆ ಸಂಬಂಧ ಜಾಸ್ತಿಯಾಗಿದೆ. ಮನುಷ್ಯ ಎಷ್ಟೇ ವ್ಯವಹಾರಿಕವಾಗಿ ನಡೆದುಕೊಂಡರೂ ಮಾನವೀ ಯತೆಯನ್ನು ಮರೆಯಬಾರದು. ಇಂದು ಜಾತಿ ದಂಗೆಗಳು, ಧರ್ಮ ದಂಗೆಗಳು ಜರುಗುತ್ತಿದ್ದು ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿವೆ. ರಾಮನಮಲಿಯವರ ಈ ಕೃತಿ ಮಾನವೀಯ ಮೌಲ್ಯಗಳನ್ನು ತಿಳಿಸುತ್ತದೆ ಎಂದರು.



ಪುಸ್ತಕ ಕುರಿತು ಗಂಗಾವತಿಯ ಎಸ್. ಕೆ.ಎನ್. ಜಿ.ಸ. ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಮಮ್ತಾಜ್ ಬೇಗಂ ಮಾತನಾಡಿ, ನಾವು ಸುಡುವ ವರ್ತಮಾನ ದಲ್ಲಿದ್ದೇವೆ. ಮಮತೆ, ವಾತ್ಸಲ್ಯ, ಕರುಣೆ, ನಯ -ವಿನಯ ಕಣ್ಮರೆಯಾಗುತ್ತಿದ್ದು, ಮೌಲ್ಯಗಳು ಕಳೆದುಹೋಗುತ್ತಿವೆ. ಸೌಹಾರ್ದತೆಯ ಬಗ್ಗೆ ತಿಳಿಹೇಳುವ ಅವಶ್ಯಕತೆ ಇದ್ದು, ಸಮಾನತೆಯ ಸಮಾಜವನ್ನು ಕಟ್ಟಬೇಕಿದೆ ಎಂದರು.

**ಹರಪನಹಳ್ಳಿ**

ತೆಗ್ಗಿನಮಠದ ಆಡಳಿತಾಧಿಕಾರಿ ಟಿ.ಎಂ. ಚಂದ್ರಶೇಖರ್ ಮಾತನಾಡಿ, ಸಮಾಜದಲ್ಲಿರುವ ಅಂಕು-ಡೊಂಕುಗಳನ್ನು ತಿದ್ದುವಲ್ಲಿ ಇಂತಹ ಕೃತಿಗಳ ಪಾತ್ರ ಬಹುಮುಖ್ಯವಾಗಿದೆ. ಪ್ರಾಣಿಗಳಲ್ಲಿ ಇರುವ ಸೌಹಾರ್ದತೆ ಮನುಷ್ಯರಲ್ಲಿ ಇಲ್ಲದೇ ಇರುವುದು ದುರಂತವೇ ಸರಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಖಂಡ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ನಿಷ್ಟಿ ರುದ್ರಪ್ಪ ಮಾತನಾಡಿ, ಇಂದು ಜಾತಿ, ಮತ, ಧರ್ಮದ ಹೆಸರಿನಲ್ಲಿ ಗಲಾಟೆಗಳು ಆಗುತ್ತಿವೆ. ಕವಿಗಳಿಗೆ ಸಾಹಿತಿಗಳಿಗೆ ಯಾವುದೇ ಸೀಮೆ ಇಲ್ಲ. ಕೃತಿಯು ಭಾವೈಕ್ಯತೆಗೆ ನಾಂದಿ ಹಾಡಿದೆ ಎಂದರು.

ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ಮಾತನಾಡಿ, ಮೊಬೈಲ್ ಮತ್ತು ಟಿವಿಗಳಿಂದ ಓದುವ, ಬರೆಯುವ ಹವ್ಯಾಸ ಕಡಿಮೆಯಾಗುತ್ತಿದ್ದು, ಕಥೆ, ಕವನ ಬರೆಯುವ ಹವ್ಯಾಸ ರೂಢಿ ಮಾಡಿಕೊಳ್ಳಿ ಎಂದರು.

ಕೃತಿಕಾರ ಡಿ.ರಾಮನಮಲಿ ಮಾತನಾಡಿ, ವಿವಿಧ ಕಾಲಘಟ್ಟವನ್ನರಿತು ನಾನು ಕಲ್ಪನೆ ಕಥೆ ಕಟ್ಟಿ ಈ ಕೃತಿಯನ್ನು ರಚಿಸಿದ್ದೇನೆ. ಓದುಗರು ತಪ್ಪದೇ ಕೃತಿ ಓದಬೇಕು ಎಂದರು.

ತೆಗ್ಗಿನಮಠ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವಿಜಯಲಕ್ಷ್ಮಿ, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕ ರಾಜಾ ಭಕ್ಷಿ, ವಕೀಲ ಕಣವಿಹಳ್ಳಿ ಮಂಜುನಾಥ್, ರಂಗಕರ್ಮಿ ಬಿ.ಪರಶುರಾಮ. ಹಗರಿಬೊಮ್ಮನಹಳ್ಳಿಯ ಸಾಹಿತಿಗಳಾದ ಮೇಟಿ ಕೊಟ್ರಪ್ಪ, ಇಸ್ಮಾಯಿಲ್ ಎಲಿಗಾರ್, ಕೋಡಿಹಳ್ಳಿಯ ಪೂಜಾರ್ ಬಸವರಾಜ, ಮುಖಂಡರಾದ ಹಡಗಲಿ ಮಠ್. ಬಾಗಳಿ ರಾಜಶೇಖರ, ಹೇಮಣ್ಣ ಮೋರಗೇರಿ, ಗುಡಿಹಳ್ಳಿ ಹಾಲೇಶ, ಪೂಜಾರ್ ಷಣ್ಮುಖಪ್ಪ, ಶಿಕ್ಷಕಿ ಮಮ್ತಾಜ್ ಬೇಗಂ, ಶೇಖರನಾಯ್ಕ ಮತ್ತಿತರರು ಇದ್ದರು.

# ಬಿಎಂಟಿಸಿ ಕಂಡಕ್ಟರ್ ನೇಮಕಾತಿಗೆ ಪರೀಕ್ಷೆ: ಸುಗಮ ಪರೀಕ್ಷೆಗೆ ಸೂಚನೆ



ದಾವಣಗೆರೆ, ಆ.31-ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿನ ಕಂಡಕ್ಟರ್ ಹುದ್ದೆಗಳ ನೇಮಕಾತಿಗೆ ಸೆಪ್ಟೆಂಬರ್ 1 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದ್ದು, ನಗರದ 4 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಈ ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಕೆಇಎ ನಿರ್ದೇಶನದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಿನ್ನೆ ನಡೆದ ಪರೀಕ್ಷಾ ಪೂರ್ವ ಸಿದ್ದತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಸೂಚನೆ ನೀಡಿದರು.

ನಾಳೆ ದಿನಾಂಕ 1ರ ಭಾನುವಾರ ನಗರದ ಎ.ವಿ.ಕಮಲಮ್ಮ ಪಿಯು ಕಾಲೇಜು ಕೇಂದ್ರದಲ್ಲಿ 552, ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು 553, ರಾಜನಹಳ್ಳಿ ಸೀತಮ್ಮ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು 552 ಹಾಗೂ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ 552 ಅಭ್ಯರ್ಥಿಗಳು ಸೇರಿ ಒಟ್ಟು 2209 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಅವರು ಹೇಳಿದರು.

ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತ 144ನೇ ಸೆಕ್ಷನ್ ಜಾರಿಗೊಳಿಸಿ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಈ ವೇಳೆ ಅಲ್ಲಿ ಯಾವುದೇ ಜೆರಾಕ್ಸ್ ಅಂಗಡಿ, ಇಂಟರ್‌ನೆಟ್ ಸೆಂಟರ್‌ಗಳನ್ನು ತೆರೆಯುವಂತಿಲ್ಲ ಎಂದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ಹಾಗೂ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

# ಗುರಿ ಸಾಧನೆಗೆ ಸಮಯದ ನಿರ್ವಹಣಾ ಮಹತ್ವ ಮುಖ್ಯ : ಅನಿತಾ ದೊಡ್ಡಗೌಡರ್

ದಾವಣಗೆರೆ, ಆ. 31- ಸ್ಪರ್ಧಾತ್ಮಕ ಯುಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ, ಗುರಿ ಸಾಧಿಸಲು ಸಮಯದ ನಿರ್ವಹಣೆಯ ಮಹತ್ವವನ್ನು ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಅನಿತಾ ಹೆಚ್. ದೊಡ್ಡಗೌಡರ್ ತಿಳಿಸಿದರು.



ನಗರದ ವಿನ್ನರ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿಗಳ ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡುತ್ತಿದ್ದರು.

ಜೀವನದ ಉನ್ನತಿಗೆ ಬೇಕಾಗಿರುವ ಪ್ರಮುಖ ಅಂಶಗಳಾದ ತಾಳ್ಮೆ ಮತ್ತು ಸಮಯದ ಕೌಶಲ್ಯಗಳಲ್ಲಿ ಗುರಿಯ ಅರಿವು, ಭೌತಿಕ, ಮಾನಸಿಕ ಸಮತೋಲನ, ವ್ಯಕ್ತಿತ್ವ ವಿಕಸನ, ಪರೀಕ್ಷಾ ತಯಾರಿಯ ಸಿದ್ಧತೆ, ಅರ್ಥಪೂರ್ಣ ಕಲಿಕೆ, ವೈಫಲ್ಯಕ್ಕೆ ಧೃತಿಗೆಡದಿರುವುದು ಇತ್ಯಾದಿಗಳ ಬಗ್ಗೆ ಸವಿಸ್ತಾರವಾಗಿ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಸಮಯದ ನಿರ್ವಹಣಾ ಕೌಶಲ್ಯದ ಬಗ್ಗೆ ವಿವರಿಸಿದರು. ಈ ಕೌಶಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಏನನ್ನಾದರೂ ಸಾಧಿಸಬಹುದು ಎಂದು ಅನಿತಾ ದೊಡ್ಡಗೌಡರ್ ಅವರು ತಿಳಿಸಿದರು.

**ವಿದ್ಯಾರ್ಥಿಗಳಿಗೆ ಕಿವಿಮಾತು**

ಕಬ್ಬೂರು ಎಜುಕೇಷನ್ ಸೊಸೈಟಿಯ ನಿರ್ದೇಶಕ ಶಿವರಾಜ್ ಕಬ್ಬೂರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಜೀವನದಲ್ಲಿ ಕಳೆದು ಹೋದ ಸಮಯ ಎಂದೂ ಸಿಗಲಾರದು. ಒಂದೊಂದು ಕ್ಷಣವನ್ನು ಸದ್ಬಳಕೆಗೆ ಉಪಯೋಗಿಸಿ, ನಿಮ್ಮ ಗುರಿ ತಲುಪಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಮಂಜಣ್ಣ, ಗುರು, ನಾಗರಾಜ್ ಮತ್ತು ಇತರರು ಉಪಸ್ಥಿತರಿದ್ದರು.

## ವ್ಯಕ್ತಿಯನ್ನು ಮಾದಕ ಪ್ರಕರಣದಲ್ಲಿ ಸಿಲುಕಿಸಿದ ಪೊಲೀಸರು: ಅಮಾನತ್ತು

ಮುಂಬೈ, ಆ. 31 - ವ್ಯಕ್ತಿ ಒಬ್ಬರನ್ನು ಮಾದಕ ಪ್ರಕರಣದಲ್ಲಿ ಸಿಲುಕಿಸಲು ಪೊಲೀಸರು ತಾವೇ ಮಾದಕವನ್ನು ತಂದಿರಿಸಿದ ಸಿಸಿಟಿವಿ ದೃಶ್ಯ ವೈರಲ್ ಆಗಿದೆ. ನಂತರ ನಾಲ್ವರು ಪೊಲೀಸರನ್ನು ಅಮಾನತ್ತುಗೊಳಿಸಲಾಗಿದೆ.

ಸಬ್ ಇನ್ಸ್‌ಪೆಕ್ಟರ್ ಹಾಗೂ ಮೂವರು ಪೇದೆಗಳನ್ನು ಅಮಾನತ್ತು ಗೊಳಿಸಲಾಗಿದೆ ಎಂದು ಡಿಸಿಪಿ ರಾಜತಿಲಕ್ ರೋಷನ್ ತಿಳಿಸಿದ್ದಾರೆ. ಖರ್ ಪೊಲೀಸ್ ಠಾಣೆಯ ಉಗ್ರವಾದ ವಿರೋಧಿ ದಳದ ಜೊತೆ ಕಾರ್ಯನಿರ್ವಹಿಸುತ್ತಿದ್ದ ಈ ಪೊಲೀಸರು ಕಳೆದ ಶುಕ್ರವಾರ ಡೇನಿಯಲ್ ಎಂಬ ವ್ಯಕ್ತಿಯನ್ನು ಬಂಧಿಸಿದ್ದರು.

ಆದರೆ ಸಿಸಿಟಿವಿ ದೃಶ್ಯದಲ್ಲಿ ಪೊಲೀಸ್ ಒಬ್ಬರು ಆರೋಪಿಯ ಜೇಬಿನಲ್ಲಿ ಮಾದಕ ಇಡುತ್ತಿದ್ದ ದೃಶ್ಯ ಕಂಡು ಬಂದಿತ್ತು.

ಈ ಬಗ್ಗೆ ಸ್ಥಳೀಯ ಸುದ್ದಿ ವಾಹಿನಿ ಜೊತೆ ಮಾತನಾಡಿರುವ ಡೇನಿಯಲ್, ಮಾದಕ ಪ್ರಕರಣದಲ್ಲಿ ಸಿಲುಕಿಸುವುದಾಗಿ ಪೊಲೀಸರು ತಮಗೆ ಬೆದರಿಕೆ ಹಾಕಿದ್ದರು. ಆದರೆ ಸಿಸಿಟಿವಿ ಕ್ಯಾಮೆರಾದಲ್ಲಿ ಪೊಲೀಸರ ಕೃತ್ಯ ಸೆರೆಯಾಗಿತ್ತು. ನಂತರ ನನ್ನನ್ನು ಬಿಡುಗಡೆ ಮಾಡಲಾಗಿತ್ತು ಎಂದಿದ್ದಾರೆ.

## ನಗರದಲ್ಲಿ ಶಂಕರ ಸೇವಾ ಸಂಘದ ಸಭೆ

ಶಂಕರ ಸೇವಾ ಸಂಘದ ವಾರ್ಷಿಕ ಮಹಾಸಭೆಯು ಇಂದು ಸಂಜೆ 6 ಗಂಟೆಗೆ ವರ್ತುಲ ರಸ್ತೆಯ ಎಸ್.ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಶ್ರೀನಿವಾಸ್ ಜೋಶಿ ತಿಳಿಸಿದ್ದಾರೆ.

## ತನಿಖಾ ಆಯೋಗದ ವರದಿ ಸಲ್ಲಿಕೆ

**(1ನೇ ಪುಟದಿಂದ)** ಸಾಮಗ್ರಿಗಳ ಖರೀದಿ, ವಿತರಣೆಯ ನಿರ್ವಹಣೆಯಲ್ಲಿ ನಡೆದಿರುವ ಅವ್ಯವಹಾರ, ಲೋಪದೋಷಗಳ ಕುರಿತು ಆಯೋಗವು 11 ತಿಂಗಳಲ್ಲಿ ವಿಸ್ತೃತ ತನಿಖೆ ನಡೆಸಿ, ವರದಿ ನೀಡಿದೆ.

2023ರಲ್ಲಿ ಸಮಿತಿ ರಚಿಸಲಾಗಿತ್ತು. ವರದಿ ಸಲ್ಲಿಸಲು ಮೂರು ತಿಂಗಳ ಅವಧಿ ನೀಡಲಾಗಿತ್ತು. ನಂತರ 2024ರ ಮೇ 24ರವರೆಗೆ ವಿಸ್ತರಿಸಲಾಗಿತ್ತು. ಆಯೋಗದ ಅಧ್ಯಕ್ಷರ ಕೋರಿಕೆಯಂತೆ ಇದೇ ಆಗಸ್ಟ್ 31ರವರೆಗೂ ವಿಸ್ತರಿಸಲಾಗಿತ್ತು. ಅವಧಿ ಮುಗಿಯುವ ಕೊನೆಯ ದಿನ ಆಯೋಗ ವರದಿ ಸಲ್ಲಿಸಿದೆ.

ವೆಂಟಿಲೇಟರ್‌ಗಳ ಖರೀದಿ, ಆಕ್ಸಿಜನ್ ಉಪಕರಣಗಳ ಖರೀದಿ, ನಿರ್ವಹಣಾ ಉಪಕರಣಗಳು, ರಾಪಿಡ್ ಆಂಟಿಜೆನ್ ಟೆಸ್ಟ್ ಕಿಟ್‌ಗಳ ಖರೀದಿ ಮತ್ತು ಸಂಗ್ರಹಣೆಯಲ್ಲಿ ಲೋಪ ಸೇರಿದಂತೆ ಹಲವು ಅಕ್ರಮಗಳು ನಡೆದಿವೆ. ಸಾವಿರಾರು ಕೋಟಿ ರೂ.ಗಳ ಅಕ್ರಮವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.

## ರಾಣೇಬೆನ್ನೂರಿನಲ್ಲಿ ಮನೆ ಬೀಗ ಮುರಿದು ಆಭರಣಗಳ ಕಳ್ಳತನ

ರಾಣೇಬೆನ್ನೂರು, ಆ. 31- ಮೊನ್ನೆ ರಾತ್ರಿ ಇಲ್ಲಿನ ಚಿದಂಬರ ನಗರದ ಪುಷ್ಪಾವತಿ ಪರಮೇಶ ನಾಯಕ್ ಎಂಬುವವರ ಮನೆಯ ಬೀಗ ಮುರಿದಿರುವ ಕಳ್ಳರು, ಮನೆಯಲ್ಲಿದ್ದ ಕ್ಯಾಮರಾ, ಮೊಬೈಲ್, ವಾಚ್ ಹಾಗೂ ಬೆಳ್ಳಿ, ಬಂಗಾರದ ಆಭರಣ ಸೇರಿದಂತೆ 7.20 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಕಳವು ಮಾಡಿದ್ದಾರೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಿರ್ಗತಿಕರ ಸೇವೆಯಲ್ಲಿಯೇ ಬದುಕಿನ ಪ್ರೀತಿ ಕಾಣಬೇಕು

ದಾವಣಗೆರೆ, ಆ.31- ಅನಾಥರು, ಬಡವರು ಹಾಗೂ ನಿರ್ಗತಿಕರ ಸೇವೆಯಲ್ಲಿಯೇ ಬದುಕಿನ ಪ್ರೀತಿ ಕಂಡ ಮದರ್ ಥೆರೇಸಾ ಅವರ ಹಾದಿಯಲ್ಲಿಯೇ ನಾವೆಲ್ಲರೂ ಸಾಗಬೇಕು ಎಂದು ಶಿವನಕೆರೆ ಬಸವಲಿಂಗಪ್ಪ ಹೇಳಿದರು.



ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯ ಸರ್ಕಾರಿ ಶುಶ್ರೂಷ ತರಬೇತಿ ಶಾಲೆಯಲ್ಲಿ ನಡೆದ 'ಮದರ್ ಥೆರೇಸಾ ಸೇವಾ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸದಾ ಸಂತಸದಿಂದ ಇದ್ದು, ಸಂತಸ ಹಂಚಿಕೊಳ್ಳುವಿಕೆ ಬದುಕಿನ ಭಾಗವಾಗಬೇಕು ಎಂದ ಅವರು, ನಾವು ಬದುಕುವ ಜತೆಗೆ ಇತರರನ್ನು ಬದುಕಲು ಬಿಡಬೇಕು ಎಂದು ಹೇಳಿದ ಮದರ್ ಥೆರೇಸಾ ಅವರ ಮೌಲ್ಯ ಪಾಲನೆ ಮಾಡಬೇಕು ಎಂದು ಸಲಹೆ ನೀಡಿದರು. ಮಾನವನ ಅಹಂಕಾರ, ದುರಾಸೆ, ದ್ವೇಷ ಹಾಗೂ ಹೊಟ್ಟೆಕಿಚ್ಚು ಎಂಬ ರೋಗ ಹೋಗಲಾಡಿಸಲು ಪ್ರೀತಿ, ಏಕತೆ ಮತ್ತು ವಿವೇಕತೆಯೇ ದಿವ್ಯ ಔಷಧ ಎಂದು ಹೇಳಿದರು.

**ಶಿವನಕೆರೆ ಬಸವಲಿಂಗಪ್ಪ ಆಶಯ**

ಕರುಣಾ ಟ್ರಸ್ಟಿನ ಅಧ್ಯಕ್ಷ ಡಾ.ಹೆಚ್.ಎನ್. ಮಲ್ಲಿಕಾರ್ಜುನ್ ಮಾತನಾಡಿ, ರೋಗಿಗಳನ್ನು ಭೇದದಿಂದ ಕಾಣದೇ ಅವರ ನೋವು ಅರಿತು ಪ್ರೀತಿ, ಕರುಣೆಯಿಂದ ಚಿಕಿತ್ಸೆ ನೀಡುವ ಗುಣ ಬೆಳೆಸಿಕೊಳ್ಳಬೇಕು ಎಂದು ಶುಶ್ರೂಷ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಚಿಗಟೇರಿ ಜಿಲ್ಲಾಸ್ಪತ್ರೆಯ ಅಧೀಕ್ಷಕ ಡಾ. ನಾಗೇಂದ್ರಪ್ಪ ಮಾತನಾಡಿ, ವೈದ್ಯ ಮತ್ತು ಶುಶ್ರೂಷಕರ ವೃತ್ತಿ ಅತ್ಯಂತ ಪವಿತ್ರವಾದುದು. ಶುಶ್ರೂಷಕರು, ವೈದ್ಯ ಮತ್ತು ರೋಗಿಗಳಿಗೆ ಸೇತುವೆಯಾಗಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಗುಣೇಶ್ವರಿ, ಜಯಮ್ಮ, ಅನಿತ, ಕಾವೇರಿ ಮತ್ತು ರಾಮಚಂದ್ರಪ್ಪ ಅವರಿಗೆ 'ಮದರ್ ಥೆರೇಸಾ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯೆ ನಳಿನಾಕ್ಷಿ, ಗೋವಿಂದ್, ಶುಶ್ರೂಷ ತರಬೇತಿ ಶಾಲೆಯ ವಿದ್ಯಾರ್ಥಿಗಳು ಇದ್ದರು.


**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**
ನಂ. 473/1,2-ಎ, 16ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೆಟಿಜೆ ನಗರ ದಾವಣಗೆರೆ - 577 002.
ಮೊ. : 99011 20124, 98447 36220

**ಫರ್ನೀಚರ್‌ಗಳು ಮಾರಾಟಕ್ಕಿವೆ**

ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗೆ ಸಂಬಂಧಿಸಿದಂತೆ ಫರ್ನೀಚರ್‌ಗಳು, ಸ್ಟ್ರಾಂಗ್ ರೂಂನ 2 ಡೋರ್‌ಗಳು ಮಾರಾಟಕ್ಕಿವೆ. ದರಪಟ್ಟಿ ಸಲ್ಲಿಸಲು ದಿನಾಂಕ 3-9-2024 ಕೊನೆ ದಿನ. ವಿವರಕ್ಕೆ ಆಸಕ್ತರು ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

- ವ್ಯವಸ್ಥಾಪಕರು

**WANTED**

Lady Clerk - 2 No.s
(Qualification - PUC Pass/Fail)

Lady Accountant - 2 No.s
(Experience In Tally)

Sales Girl - 2 No.s

**SAMYAK CERAMICS**
# 646/3, Hadadi Road,
Near Uday Super Bazar, Davangere.
94486 58255



**ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ದಾವಣಗೆರೆ.**

ಓ.ಎಸ್. ನಂ. 533/2013
ವಾದಿಯರು : ಶ್ರೀಮತಿ ಗೌರಮ್ಮ
- ವಿರುದ್ಧ -

ಪ್ರತಿವಾದಿಗಳು :
ಶ್ರೀಮತಿ ಬಸಮ್ಮ ಮತ್ತು ಇತರರು, ಪ್ರತಿವಾದಿ 5 ರೇವಣಸಿದ್ದಪ್ಪ.ಬಿ.ಕೆ (ಕಾಡಜ್ಜೆರ್), ಇವರ ಪೌತಿ ವಾರಸುದಾರರು.

5.ಎ) ಶ್ರೀಮತಿ ಸುಜಾತ ಕೋಂ ರೇವಣಸಿದ್ದಪ್ಪ.ಬಿ.ಕೆ (ಕಾಡಜ್ಜೆರ್), ವಯಸ್ಸು 55 ವರ್ಷ, ವಾಸ : ಬಸವನಾಳು ಗ್ರಾಮ ಮತ್ತು ಅಂಚೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

5.ಬಿ) ಶ್ರೀಮತಿ ಸಾವಿತ್ರ.ಬಿ.ಆರ್. ಬಿನ್ ರೇವಣಸಿದ್ದಪ್ಪ.ಬಿ.ಕೆ. (ಕಾಡಜ್ಜೆರ್),. ಕೋಂ ಮಧು.ಎನ್.ಬಿ. (ಬ್ಯಾಡಗೇರ) ವಯಸ್ಸು 32 ವರ್ಷ, ವಾಸ : ನಾಗಕಟ್ಟೆ ಗ್ರಾಮ, ರಾಂಪುರ ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರ ಅಡಿಯಲ್ಲಿ ನೀಡಲಾದ ಪತ್ರಿಕಾ ಪ್ರಕಟಣಾ ನೋಟೀಸು**

ಮೇಲ್ಕಂಡ ಪ್ರಕರಣದಲ್ಲಿ ವಾದಿಯು ಪ್ರತಿವಾದಿಯರ ವಿರುದ್ಧ ಮಾನ್ಯ ಸಿವಿಲ್ 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ದಾವಣಗೆರೆ ಇವರ **ಅಸಲು ದಾವೆ ನಂ. 533/2013** ರಿತ್ಯ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಪ್ರತಿವಾದಿ 5ರವರು **ದಿನಾಂಕ : 25-08-2020 ರಂದು ಮೃತರಾಗಿದ್ದು** ಮೃತರ ಪೌತಿ ವಾರಸುದಾರರಾದ ಪ್ರತಿವಾದಿ 5(ಎ), 5(ಬಿ)ರವರು ಇದ್ದು ಸದರಿಯವರಿಗೆ ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್ ಜಾರಿಯಾಗದಿದ್ದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದು, ನಿಮ್ಮ ಹಾಜರಾತಿಗಾಗಿ **ದಿನಾಂಕ : 30-9-2024 ರಂದು ಬೆಳಿಗ್ಗೆ 11-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು,** ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಪ್ರಕರಣದಲ್ಲಿ ಹಾಜರಾಗಿ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ವಿರುದ್ಧ ನ್ಯಾಯಾಲಯವು ಏಕ ಪಕ್ಷೀಯ ಆದೇಶ ಮಾಡಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 30-8-2024 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/- ಕರಿಬಸಪ್ಪ.ಕೆ.ಕೆ., ಅಪೀಲುದಾರರ ಪರ ವಕೀಲರು ದಾವಣಗೆರೆ.

ಸಹಿ/- ಶಿರಸ್ತೆದಾರರು, 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

# ಮಾಧ್ಯಮಗಳು ಫೇಕ್‌ನ್ಯೂಸ್ ವಿರುದ್ಧ ಹೋರಾಡಬೇಕಿದೆ: ಸಂಸದೆ ಡಾ. ಪ್ರಭಾ



ದಾವಣಗೆರೆ, ಆ. 31 - ಫೇಕ್‌ನ್ಯೂಸ್‌ಗಳ ವಿರುದ್ಧ ಹೋರಾಟ ನಡೆಸಲು ಮಾಧ್ಯಮಗಳು ಆದ್ಯತೆ ನೀಡಬೇಕಿದೆ ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಿದ್ದ ವರದಿಗಾರರ ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಫೇಕ್‌ನ್ಯೂಸ್‌ಗಳ ಹಾವಳಿ ಅತಿ ಹೆಚ್ಚಾಗಿ ಹರಡುತ್ತಿದ್ದು, ಇದಕ್ಕೆ ಕಡಿವಾಣ ಹಾಕುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸಬೇಕಿದೆ ಎಂದವರು ಹೇಳಿದರು.

ಪತ್ರಿಕೆಗಳ ಓದಿನಿಂದ ಏಕಾಗ್ರತೆ ಹೆಚ್ಚಾಗುತ್ತಿದೆ. ಪ್ರತಿ ಮನೆಯಲ್ಲೂ ಪತ್ರಿಕೆಗಳನ್ನು ತರಿಸುವ ಹಾಗೂ ಮಕ್ಕಳಿಗೆ ಪತ್ರಿಕೆ ಓದುವ ಅಭಿರುಚಿ ಬೆಳೆಸುವ ಅಗತ್ಯವಿದೆ ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ವರದಿಗಾರರ ಕೂಟಕ್ಕೆ ನಿವೇಶನ ಒದ ಗಿಸಲು ಹಾಗೂ ಪತ್ರಕರ್ತರಿಗೆ ನಿವೇಶನ ಒದಗಿಸಲು ಪ್ರಾಮಾಣಿಕ ಪ್ರಯತ್ನ ನಡೆಸು ವುದಾಗಿ ಅವರು ಭರವಸೆ ನೀಡಿದರು.

ಮುಂಬರುವ ದಿನಗಳಲ್ಲಿ ತಮ್ಮ ಅತ್ತೆ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅವರ ಹೆಸರಿನಲ್ಲಿ ಪತ್ರಕರ್ತರಿಗೆ ಆರ್ಥಿಕ ನೆರವು ನೀಡುವ ಯೋಜನೆ ಆರಂಭಿಸುವ ಪ್ರಸ್ತಾವನೆ ಇದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಶಾಸಕ ಬಿ.ಪಿ. ಹರೀಶ್, ಪತ್ರಕರ್ತರಿಗೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯ ಗಳನ್ನು ಕಲ್ಪಿಸಲು ಆಡಳಿತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದರು.

ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ವರದಿಗಾರರ ಕೂಟ ಸಿ.ಎ. ನಿವೇಶನಕ್ಕೆ ಅರ್ಜಿ ಸಲ್ಲಿಸದಲ್ಲಿ, ನೀಡಲು ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು. ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್ ಹಾಗೂ ಕೂಟದ ಗೌರವಾಧ್ಯಕ್ಷ ಬಿ.ಎನ್. ಮಲ್ಲೇಶ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಪತ್ರಕರ್ತರಿಗೆ ಮಾಧ್ಯಮ ಪ್ರಶಸ್ತಿ ಹಾಗೂ ಜೀವಮಾನ ಸಾಧನೆಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ಪತ್ರಕರ್ತರಾದ ಕೆ. ಚಂದ್ರಣ್ಣ, ಸದಾನಂದ ಹೆಗಡೆ, ಮಂಜುನಾಥ ಗೌರಕ್ಕಳವರ್, ಮಲ್ಲಿಕಾರ್ಜುನ ಕಬ್ಬೂರು, ಎಂ.ಬಿ. ನವೀನ್, ಪ್ರಧಾನ ಕಾರ್ಯದರ್ಶಿ ಎಂ.ವೈ. ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಚೇತನ್ ಪ್ರಾರ್ಥಿಸಿದರೆ, ತೇಜಸ್ವಿನಿ ನಿರೂಪಿಸಿದರು.

## ಪ್ರಧಾನಿ ಕರೆ

(1ನೇ ಪುಟದಿಂದ) ಕಾನೂನುಗಳನ್ನು ರೂಪಿಸಲಾಗಿದೆ. 2019ರಲ್ಲಿ ಶೀಘ್ರ ಪಥ ವಿಶೇಷ ನ್ಯಾಯಾಲಯ ಯೋಜನೆಗೆ ಚಾಲನೆ ನೀಡಲಾಗಿದೆ ಎಂದು ಮೋದಿ ಹೇಳಿದರು.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ವೇಗವಾಗಿ ನ್ಯಾಯ ಒದಗಿಸಿದಷ್ಟು, ಮಹಿಳೆಯ ರಿಗೆ ಹೆಚ್ಚಿನ ಸುರಕ್ಷತೆಯ ಭರವಸೆ ಸಿಗುತ್ತದೆ ಎಂದು ಪ್ರಧಾನಿ ತಿಳಿಸಿ ದರು. ಜಿಲ್ಲಾ ನ್ಯಾಯಾಧೀಶರು, ಜಿಲ್ಲಾ ಮ್ಯಾಜಿಸ್ಟ್ರೇಟ್ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಒಳಗೊಂಡ ಜಿಲ್ಲಾ ಉಸ್ತುವಾರಿ ಸಮಿತಿಯು ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು ಎಂದವರು ತಿಳಿಸಿದರು.

ಕೇಂದ್ರ ಸರ್ಕಾರ 2019ರಲ್ಲಿ ಶೀಘ್ರ ಪಥ ವಿಶೇಷ ನ್ಯಾಯಾಲಯ ಯೋಜನೆ ಜಾರಿಗೆ ತಂದಿತ್ತು. ಮಹಿಳೆಯರು ಹಾಗೂ ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯ ಪ್ರಕರ ಣಗಳ ವಿಚಾರಣೆಗಾಗಿ ಈ ವ್ಯವಸ್ಥೆ ರೂಪಿಸಲಾಗಿತ್ತು. ಈ ಯೋಜನೆ ಜಾರಿಗೆ ಬಂದ ನಂತರ ವಿಶೇಷ ನ್ಯಾಯಾಲಯಗಳು 2.53 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಿವೆ.

# ಸಿಎಂ ವಿರುದ್ಧದ ಪ್ರಾಸಿಕ್ಯೂಷನ್ ಅನುಮತಿ ರದ್ದುಗೊಳಿಸಲು ಹಾಲುಮತ ಸಭಾ ಆಗ್ರಹ

ಹೊನ್ನಾಳಿ, ಆ.31- ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿದ ಅನುಮತಿಯನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ಹಾಲುಮತ ಮಹಾಸಭಾ ಹಾಗೂ ವಿವಿಧ ಸಂಘಟನೆಗಳಿಂದ ಈಚೆಗೆ ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪ್ರತಿಭಟನೆ ನಡೆಯಿತು.



ನ್ಯಾಮತಿ

ರಾಯಣ್ಣ ವೃತ್ತದಲ್ಲಿ ಜಮಾಯಿಸಿದ ಮಹಾಸಭಾದ ಹಾಗೂ ವಿವಿಧ ಸಂಘಟನೆಯ ಕಾರ್ಯಕರ್ತರು ತಾಲ್ಲೂಕು ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ ಪಟ್ಟರಾಜಗೌಡ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಹಾಲುಮತ ಮಹಾಸಭಾದ ತಾಲ್ಲೂಕು ಅಧ್ಯಕ್ಷ ರಾಜು ಕಡಗಣ್ಣಾರ ಮಾತನಾಡಿ, ಕಳಂಕ ರಹಿತ ಉತ್ತಮ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ಅವರನ್ನು ರಾಜಕೀಯ ದುರುದ್ದೇಶದಿಂದ ಪದಚ್ಯುತಿಗೊಳಿಸಲು ವಿರೋಧ ಪಕ್ಷಗಳು ಮಾಡಿದ ಹುನ್ನಾರವನ್ನು ಸರಿಯಾಗಿ ಪರಿಶೀಲಿಸದೇ ರಾಜ್ಯಪಾಲರು ತರಾತುರಿಯಲ್ಲಿ ಪ್ರಾಸಿಕ್ಯೂಷನ್‌ಗೆ ಆದೇಶ ಹೊರಡಿಸಿರುವುದು ಸಂವಿಧಾನ ಬಾಹಿರ ಎಂದರು.

ದಲಿತ ಮುಖಂಡ ದಿಡಗೂರು ತಮ್ಮಣ್ಣ ಮಾತನಾಡಿ, ಬಾಂಗ್ಲಾ ಹಾಗೂ ಶ್ರೀಲಂಕಾ ಮಾದರಿಯಲ್ಲಿ ರಾಜ್ಯದಲ್ಲೂ ಜನರು ಭುಗಿಲೇಳುವುದರಲ್ಲಿ ಸಂದೇಹವಿಲ್ಲ ಎಂದರು.

ಕರವೇ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಶೋಷಿತ ವರ್ಗಗಳನ್ನು ಪ್ರತಿನಿಧಿಸುತ್ತಿದ್ದ ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ, ವೀರಪ್ಪ ಮೊಯ್ಲಿಯವರ ಪದಚ್ಯುತಿಯಾಗಿತ್ತು. ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧವೂ ತಂತ್ರ ನಡೆಸುವ ರಾಜ್ಯಪಾಲರ ನಡೆಯನ್ನು ಹಾಲುಮತ ಮಹಾಸಭಾ, ಶೋಷಿತ ವರ್ಗಗಳು, ಕನ್ನಡಪರ ಸಂಘಟನೆ, ದಲಿತ ಸಂಘಟನೆಗಳು ತೀವ್ರವಾಗಿ ಖಂಡಿಸುತ್ತವೆ ಎಂದು ಹೇಳಿದರು.

ಈ ವೇಳೆ ವಿನಯ್, ಕುಮಾರ, ಮಂಜು, ಮನೋಜ ವಾಲಜ್ಜಿ, ನಜೀರ್‌ಸಾಬ್, ಲಕ್ಷ್ಮಿಕಾಂತ, ಮಾರಿಕೊಪ್ಪ ಮಂಜಪ್ಪ, ಕುರುವ ಸಮಾಜದ ತಾಲ್ಲೂಕು ಮಹಿಳಾ ಅಧ್ಯಕ್ಷೆ ಪಂಕಜಾ ಅರುಣ್‌ಕುಮಾರ್, ಸೌಮ್ಯ, ಪುಷ್ಪ ರವೀಶ್, ಅಂಕಿತ, ಸಾವಿತ್ರ, ಆಶಾ, ದೊಡ್ಡೇರಿ ಆಶಾ, ಸವಿತಾ ನಾಡಿಗ್ ಸೇರಿದಂತೆ ಕಾರ್ಯಕರ್ತರು ಇದ್ದರು.

## ಕಂಪ್ಯೂಟರ್ ತರಬೇತಿಗೆ ಆರ್ಥಿಕ ಸಹಾಯ

ದಾವಣಗೆರೆ, ಆ.31- ಬಡ ವಿದ್ಯಾರ್ಥಿಗಳು ಕಂಪ್ಯೂಟರ್ ತರಬೇತಿ ಪಡೆಯಲು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಆರ್ಥಿಕ ಸಹಾಯ ನೀಡಲಿದೆ. ಉದ್ಯೋಗ ಸೃಷ್ಟಿಗೆ ಪೂರಕವಾದ ಎಂಎಸ್ ಆಫೀಸ್ (Word, Excel, PowerPoint, Access), ಡಿಟಿಪಿ, ಫೋಟೋಶಾಪ್, ಕೋರೆಲ್ ಡ್ರಾ, ಪೇಜ್‌ಮೇಕರ್ ಮತ್ತು ಟ್ಯಾಲಿ ಸೇರಿದಂತೆ ಇತರೆ ತಾಂತ್ರಿಕ ಕೋರ್ಸ್‌ಗಳ ಬಗ್ಗೆ ತರಬೇತಿ ಪಡೆಯಬಹುದು. ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಯಾವುದೇ ಪದವಿ ಪಾಸ್ ಅಥವಾ ಫೇಲ್ ಆದ ಅಭ್ಯರ್ಥಿಗಳು ಈ ಅವಕಾಶ ಸದುಪಯೋಗ ಪಡಿಸಿಕೊಳ್ಳಬಹುದು. ನೋಂದಣಿ ಹಾಗೂ ಮಾಹಿತಿಗಾಗಿ 8310520002 ಸಂಪರ್ಕಿಸಿ.

## ಎಲೆಬೇತೂರಿನಲ್ಲಿ ಆಂಜನೇಯ ಸ್ವಾಮಿಗೆ ಪೂಜೆ



ದಾವಣಗೆರೆ, ಆ. 31 - ಎಲೆಬೇತೂರು ಗ್ರಾಮದಲ್ಲಿ ಶ್ರಾವಣ ಮಾಸದ ಕೊನೆ ಶನಿವಾರ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಮಾಡಲಾಗಿತ್ತು. ಶ್ರೀ ಆಂಜನೇಯ ಸ್ವಾಮಿಗೆ ವಿವಿಧ ವರ್ಣಗಳಿಂದ ಅರ್ಚನೆ, ವಿಳ್ಯೇದೆಲೆ ಹಾರ, ಪುಷ್ಪಾಲಂಕಾರ, ತುಳಸಿಹಾರಗಳಿಂದ ಅಲಂಕಾರ ಮಾಡಲಾಗಿತ್ತು. ನಂತರ ಮಹಾಮಂಗಳಾರತಿ ಲಘು ಪ್ರಸಾದ ವಿನಿಯೋಗ ನಡೆಯಿತು. ಕೊನೆ ಶ್ರಾವಣ ಶನಿವಾರ ಆದ್ದರಿಂದ ಮುಂಜಾನೆಯಿಂದಲೇ ಭಕ್ತರು ದೇವಸ್ಥಾನಕ್ಕೆ ಬಂದು ಭಕ್ತಿ ಸಮರ್ಪಿಸುವುದು ಕಂಡುಬಂದಿತು.

# ಬೀದಿ ನಾಯಿಗಳ ನಿಯಂತ್ರಣಕ್ಕೆ ಒತ್ತಾಯಿಸಿ ನಗರಸಭೆ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ

ಹರಿಹರ, ಅ. 31 - ಸ್ಥಳೀಯ ಇಂದ್ರಾನಗರ, ಕಾಳಿದಾಸ ಬಡಾವಣೆ, ಬೆಂಕಿ ನಗರ, ಹೈಸ್ಕೂಲ್ ಬಡಾವಣೆ ಸೇರಿದಂತೆ ಹಲವು ಬಡಾವಣೆಗಳ ನಾಯಿಗಳ ಉಪಟಳ ಹೆಚ್ಚಾಗಿ ಮಕ್ಕಳಿಗೆ ಮತ್ತು ವೃದ್ದರಿಗೆ ಕಚ್ಚುತ್ತಿರುವುದರಿಂದ ಅವುಗಳನ್ನು ಬೇರೆ ಕಡೆಗೆ ಸಾಗಿಸುವಂತೆ ನಗರ ಸಭೆಯ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮತ್ತು ಆರೋಗ್ಯ ಇಲಾಖೆಯ ಸಂತೋಷ ನಾಯ್ಕ್ ನಿರ್ಲಕ್ಷ್ಯ ಮಾಡುತ್ತಿರುವುದನ್ನು ಖಂಡಿಸಿ ನಗರಸಭೆ ಸದಸ್ಯ ದಾದಾಖಲಂದರ್, ಆರ್.ಸಿ. ಜಾವೇದ್, ಮುಜಾಮಿಲ್ ಬಿಲ್ಲು ಅವರು ನಗರ ಸಭೆ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದ ಘಟನೆ ನಡೆಯಿತು.

ನಗರ ಸಭೆ ಸದಸ್ಯ ದಾದಾ ಖಲಂದರ್, ಆರ್. ಸಿ. ಜಾವೇದ್, ಮುಜಾಮಿಲ್ ಬಿಲ್ಲು ಮಾತನಾಡಿ, ಇಂದ್ರಾನಗರ ಬೆಂಕಿನಗರ, ಕಾಳಿದಾಸ ನಗರ, ಹೈಸ್ಕೂಲ್ ಬಡಾವಣೆ, ಸೇರಿದಂತೆ ಹಲವಾರು ಬಡಾವಣೆಯಲ್ಲಿ ನಾಯಿಗಳ ಉಪಟಳ ಹೆಚ್ಚಾಗಿರುತ್ತದೆ. ನಿನ್ನೆಯೂ ಸಹ ಬೆಳಿಗ್ಗೆ ಒಂದು ಮಗುವಿನ ಮೇಲೆ ನಾಯಿ ಎರಗಿ ಮಗುವನ್ನು ಕಚ್ಚಿದೆ. ಇದನ್ನು ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮತ್ತು ಆರೋಗ್ಯ ಇಲಾಖೆಯ ಸಂತೋಷ ನಾಯ್ಕ್ ಅವರ ಗಮನಕ್ಕೆ ತಂದು ನಾಯಿಗಳನ್ನು ಬೇರೆ ಸ್ಥಳಕ್ಕೆ ರವಾನಿಸುವಂತೆ ಮನವಿ ಮಾಡಿಕೊಂಡರೂ ಸಹ ಒಂದೊಂದು ರೀತಿ ಸಬೂಬು ಹೇಳುತ್ತಾರೆ. ಇದರಿಂದಾಗಿ ಬಡಾವಣೆಯಲ್ಲಿ ಮಕ್ಕಳು, ವೃದ್ಧರು ನಿರ್ಭಯವಾಗಿ ಓಡಾಡುವುದಕ್ಕೆ ತೊಂದರೆಯಾಗುವುದನ್ನು ಖಂಡಿಸಿ ನಗರಸಭೆ ಅಧಿಕಾರಿ ಮಹಾಂತೇಶ್ ಮತ್ತು ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಅವರು ಪೌರ ಕಾರ್ಮಿಕರ ಸಭೆಯನ್ನು ನಡೆಸುತ್ತಿದ್ದರೂ ನಮ್ಮ ಸಮಸ್ಯೆಗಳು ಏನು ಎಂದು ಸ್ಥಳಕ್ಕೆ ಬಂದು ಕೇಳದ ಉದ್ದಟತನದಿಂದ ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಹರಿಹರ

ಕಚೇರಿಗೆ ಬೀಗ ಹಾಕುವ ಸಂದರ್ಭದಲ್ಲಿ ನಗರಸಭೆ ಸದಸ್ಯರ ಕೊಠಡಿಯಲ್ಲಿ ಜಿಲ್ಲಾ ಯೋಜನಾ

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ಮಾಡುವುದು ಸರಿಯಾದ ಬೆಳವಣಿಗೆಯಲ್ಲ, ನಗರಸಭೆ ವತಿಯಿಂದ ದಿಢೀರ್ ನಾಯಿ ಮತ್ತು ಹಂದಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಮುಂದಾದ ತಕ್ಷಣವೇ ಪ್ರಾಣಿ ದಯಾ ಸಂಘದವರು ಅದನ್ನು ತಡೆಯಲು ಮುಂದಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಎಲ್ಲಾ ರೀತಿಯ ಸಾದಕ ಬಾದಕಗಳನ್ನು ನೋಡಿಕೊಂಡು ನಾಯಿ, ಹಂದಿಗಳನ್ನು ಬೇರೆ ಸ್ಥಳಕ್ಕೆ ರವಾನಿಸುವ ಕೆಲಸ ಮಾಡಲಾಗುತ್ತದೆ. ಒಂದು ವಾರಗಳ ಕಾಲ ಬೇಕಾಗುತ್ತದೆ ಎಂದು ಹೇಳಿದರು.

ಈ ವೇಳೆ ಸುಬ್ರಹ್ಮಣ್ಯ ಶೆಟ್ಟಿ ಮತ್ತು ನಗರಸಭೆ ಸದಸ್ಯ ದಾದಾ ಖಲಂದರ್ ನಡುವೆ ಮಾತಿನ ಚಕಮಕಿ ನಡೆದು ಅದು ವಿಕೋಪದ ಹಂತಕ್ಕೆ ತಲಪುತ್ತಿದ್ದಂತೆ ಆರ್.ಸಿ. ಜಾವೇದ್ ಅವರು ಮಧ್ಯಸ್ಥಿಕೆ ವಹಿಸುವ ಮೂಲಕ ಇನ್ನೂ ಮೂರು ನಾಲ್ಕು ದಿನಗಳ ನಂತರ ನಾಯಿಗಳನ್ನು ಬೇರೆ ಸ್ಥಳಕ್ಕೆ ರವಾನಿಸುವಂತೆ ಸುಬ್ರಹ್ಮಣ್ಯ ಶೆಟ್ಟಿ ಮತ್ತು ಆರೋಗ್ಯ ಇಲಾಖೆಯ ಸಂತೋಷ ನಾಯ್ಕ್ ಅವರಿಗೆ ಹೇಳಿ ನಗರಸಭೆಯ ಕೊಠಡಿಯ ಬಾಗಿಲನ್ನು ತೆರೆಯುವ ಮೂಲಕ ಸಮಸ್ಯೆಗೆ ತಾತ್ಕಾಲಿಕ ಅಂತ್ಯವನ್ನು ಹಾಡಿದ ಘಟನೆ ನಡೆಯಿತು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡ ದಾದಾಪೀರ್ ಭಾನುವಳ್ಳಿ, ರೆಹಮಾನ ಸಾಬ್, ಆರೋಗ್ಯ ಇಲಾಖೆಯ ಸಂತೋಷ ನಾಯ್ಕ್ ಇತರರು ಹಾಜರಿದ್ದರು.

# ನಗರದಲ್ಲಿ ಇಂದು ಕರವೇಯಿಂದ 'ಜ್ಞಾನ ಕಾಶಿ' ಪ್ರಶಸ್ತಿ ಪ್ರದಾನ

ದಾವಣಗೆರೆ, ಆ. 31- ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ವತಿಯಿಂದ ನಾಳೆ ದಿನಾಂಕ 1 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ನಗರದ ಗುರುಭವನದಲ್ಲಿ 2024-25 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ 125 ಕ್ಕೆ 125 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ 'ಜ್ಞಾನ ಕಾಶಿ' ಪ್ರಶಸ್ತಿ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಕರವೇ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಉದ್ಯಮಿ ಆರ್.ಜಿ. ಶ್ರೀನಿವಾಸ್, ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್, ಡಿಡಿಪಿಐ ಜಿ.ಕೊಟ್ರೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ, ತಿಮ್ಮಾರೆಡ್ಡಿ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆಯ ಜಿಲ್ಲಾಧಿಕಾರಿ ಡಾ. ಕೆ. ಪ್ರಕಾಶ್, ಕರವೇ ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಎಸ್.ಎಸ್. ಮಂಜುನಾಥ್, ನರೇಂದ್ರ ಜೈನ್, ಶ್ರೀನಿವಾಸ ಚಿನ್ನಿಕಟ್ಟೆ, ಓ. ಮಹೇಶ್ವರಪ್ಪ, ಹೆಚ್.ಡಿ. ನಾಗರಾಜ್ ಭಾಗವಹಿಸಲಿದ್ದಾರೆ.

ಈ ವರ್ಷದಿಂದ ಶಿಕ್ಷಣ ಕ್ರಾಂತಿಯ ಹರಿಕಾರ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ಬೆಳಗಾವಿ ಜಿಲ್ಲೆಯ ರಾಯಭಾಗದ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪ್ರಶಸ್ತಿ ಪುರಸ್ಕೃತರೂ ಮತ್ತು ಸಾಹಿತಿ ವೀರಣ್ಣ ಮಡಿವಾಳರ ಅವರಿಗೆ ನೀಡಲಾಗುತ್ತಿದೆ.

ಸಾಮಾಜಿಕ ಸೇವಾ ರತ್ನ ಪ್ರಶಸ್ತಿಯನ್ನು ಕೋಮಲ್ ಕುಂದಪ್ಪ ಜೈನ್ ಅವರಿಗೆ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವೈದ್ಯ ಡಾ. ಎಸ್.ಎ. ಗಿರಿಧರ್, ಶಿಕ್ಷಣ ಕ್ಷೇತ್ರದ ಹೆಚ್.ವಿ. ಶ್ರೀನಿವಾಸ್, ಮಾಧ್ಯಮ ಕ್ಷೇತ್ರದ ಮಹಾದೇವ, ಬಿ.ಎಂ. ಶಿವಕುಮಾರ್, ವಿಜಯ್ ಕುಮಾರ್ ಜಾಧವ್, ರಮೇಶ್, ಎಸ್.ಕೆ. ಒಡೆಯರ್, ಕಲಾವಿದ ವೈ.ಎಲ್, ಹನುಮಂತ ರಾಜ್ ಅವರನ್ನು ಗೌರವಿಸಲಾಗುವುದು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಗೌರವಾಧ್ಯಕ್ಷ ವಾಸುದೇವ ರಾಯ್ಕರ್, ಗಿರೀಶ್ ಕುಮಾರ್, ರಫೀಕ್, ಗೋಪಾಲ ದೇವರಮನಿ, ಶ್ರೀನಿವಾಸ ಮತ್ತಿತರರು ಉಪಸ್ಥಿತರಿದ್ದರು.

## ಕುಂಬಳೂರು ಗ್ರಾಮ ಪಂಚಾಯಿತಿಯಿಂದ ಭದ್ರೆಗೆ ಬಾಗಿನ



ಮಲೇಬೆನ್ನೂರು, ಆ.31- ಭರ್ತಿಯಾಗಿ ರುವ ಭದ್ರಾ ಜಲಾಶಯಕ್ಕೆ ಶುಕ್ರವಾರ ಕುಂಬಳೂರು ಗ್ರಾ.ಪಂ. ವತಿಯಿಂದ ಗಂಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು. ಗ್ರಾ. ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್. ಶಿವರಾಮ ಚಂದ್ರಪ್ಪ, ಉಪಾಧ್ಯಕ್ಷೆ ಎಸ್.ಆನಂದ್ ಕುಮಾರ್, ಸದಸ್ಯರಾದ ಕರಡಿ ಆನಂದಪ್ಪ, ಎನ್.ಜೆ.ಕಲ್ಲೇಶ್, ಹೆಚ್.ಹನುಮಂತ್ಪ, ಶ್ರೀಮತಿ ದುರ್ಗಮ್ಮ ಮಹೇಶ್ವರಪ್ಪ, ಶ್ರೀಮತಿ ವನಿತಾ ವಿಲಾಸ್, ಶ್ರೀಮತಿ ಸುನಂದಮ್ಮ ಉಮಾಪತಿ, ಶ್ರೀಮತಿ ಲಕ್ಷ್ಮಿದೇವಿ ರಂಗನಾಥ್, ಶ್ರೀಮತಿ ಅಕ್ಕಮ್ಮ ತಿಪ್ಪೇಶ್, ಪಿಡಿಓ ನರಸಿಂಹಮೂರ್ತಿ, ಕಾರ್ಯದರ್ಶಿ ರಾಜಕುಮಾರ್, ಸಿಬ್ಬಂದಿಗಳಾದ ಶ್ರೀಕಾಂತ್, ಕರಿಬಸಪ್ಪ, ಆಂಜನೇಯ, ದುರ್ಗಪ್ಪ, ಪರಸಪ್ಪ ಮತ್ತಿತರರು ಭಾಗವಹಿಸಿದ್ದರು.

## ಮಲೇಬೆನ್ನೂರು : ಇಂದು ನಂದಿ ಸೌಹಾರ್ದ ಸಹಕಾರಿ ಸಂಘದ ಸಭೆ

ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘದ 5 ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಗ್ಗೆ 11 ಗಂಟೆಗೆ ಶ್ರೀ ವೀರಶೈವ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷರಾದ ಜಿಗಳಿಯ ಗೌಡ್ರ ಬಸವರಾಜಪ್ಪ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಗಿದೆ ಎಂದು ಸಂಘದ ಪ್ರಭಾರಿ ಕಾರ್ಯದರ್ಶಿ ರುದ್ರಗೌಡ ತಿಳಿಸಿದ್ದಾರೆ.

## ನಗರದಲ್ಲಿಂದು ಗಾಯನ ಸ್ಪರ್ಧೆ

ಭಾರತ ವಿಕಾಸ ಪರಿಷದ್ ಸ್ವಾಮಿ ವಿವೇಕಾನಂದ ಶಾಖೆ ಇವರಿಂದ ದೇಶಭಕ್ತಿ ಗೀತೆಗಳ ಸಮೂಹ ಗಾಯನ ಸ್ಪರ್ಧೆಯನ್ನು ಇಂದು ಮಧ್ಯಾಹ್ನ 12.30ಕ್ಕೆ ಇಲ್ಲಿನ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಖೆಯ ಪ್ರಚಾರ ಸಮಿತಿ ಸಂಚಾಲಕರಾದ ಸಿ.ಪಿ. ಗೀತಾ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಹಾಸ್ಯ ಹರಟೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚುಟುಕು ಸಾಹಿತ್ಯ ಪರಿಷತ್, ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಭಾವಸಿರಿ ಪ್ರಕಾಶನ ಅಣಬೇರು ಇವರ ಸಹಯೋಗದಲ್ಲಿ ಇಂದು ಸಂಜೆ 5 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ 'ತುತ್ತಾ-ಮುತ್ತಾ' ಕುರಿತು ಹಾಸ್ಯ ಹರಟೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರಾಜಶೈಖರ ಗುಂಡಗಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚುಸಾಪ ಜಿಲ್ಲಾ ಕಾರ್ಯದರ್ಶಿ ಅಣಬೇರು ಕೆ.ಪಿ. ತಾರೇಶ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

ಹೆಚ್.ಬಿ. ಮಂಜುನಾಥ ನಿರ್ವಹಣೆ ಮಾಡಲಿದ್ದು, ಶಿವಯೋಗಿ ಹಿರೇಮಠ, ಸಂಧ್ಯಾ ಸುರೇಶ್, ಆನಂದ್ ಋಗ್ವೇದಿ, ಸುಮತಿ ಜಯಪ್ಪ, ವಿರೂಪಾಕ್ಷಪ್ಪ, ಲಲಿತ್ ಕುಮಾರ್ ಜೈನ್, ವೀರಭದ್ರಪ್ಪ ತೆಲಿಗಿ, ಜಗನ್ನಾಥ್ ನಾಡೀಗೇರ್, ಓಂಕಾರಯ್ಯ ತವನಿಧಿ, ತಾಜುದ್ದೀನ್ ಬೇತೂರು, ಅನ್ನಪೂರ್ಣ ಪಾಟೀಲ್ ಹರಟೆಗಾರರಾಗಿ ಭಾಗವಹಿಸಲಿದ್ದಾರೆ.

## ಓದುಗರ ಪತ್ರ

### ಹೆಚ್ಚಾಗಿದೆ ಪಿಒಪಿ ಗಣೇಶನ ಮೂರ್ತಿಗಳ ಮಾರಾಟ: ಕ್ರಮವಹಿಸದ ಅಧಿಕಾರಿಗಳು

ಮಾನ್ಯರೇ,

ಇನ್ನೇನು ಗಣೇಶನ ಹಬ್ಬ ಕೆಲವೇ ದಿನ ಉಳಿದಿದೆ. ಹಬ್ಬವನ್ನು ಆಚರಿಸಲು ಜಿಲ್ಲೆಯ ಜನತೆ ಕಾತರದಿಂದ ಕಾಯುತ್ತಿದ್ದಾರೆ. ದಾವಣಗೆರೆ ನಗರದಲ್ಲಿ ಗಣೇಶನ ಮೂರ್ತಿಗಳ ಮಾರಾಟವೂ ನಡೆಯುತ್ತಿದೆ.

ಆದರೆ ಹೊರ ರಾಜ್ಯಗಳಿಂದ ಪಿಒಪಿ ಗಣೇಶನ ಮೂರ್ತಿಗಳು ಬರುತ್ತಲೇ ಇವೆ. ಮಾರಾಟವೂ ನಡೆಯುತ್ತಿದೆ. ಆದರೆ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಪರಿಸರ ಇಲಾಖೆ ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿದ್ದಾರೆ.



ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಪರಿಸರಕ್ಕೆ ಮಾರಕವಾಗುವಂತಹ ಪಿಒಪಿ ಗಣೇಶನ ಮೂರ್ತಿಗಳನ್ನು ಮಾರಾಟ ಮಾಡುವಂತಿಲ್ಲ. ಆದಾಗ್ಯೂ ನಗರದ ವಸಂತ ಟಾಕೀಸ್ ಬಳಿ, ನಿಟುವಳ್ಳಿ ಮತ್ತಿತರೆ ಭಾಗಗಳಲ್ಲಿ ಹೊರ ರಾಜ್ಯಗಳಿಂದ ತಂದು ಪಿಒಪಿ ಗಣೇಶನ ಮೂರ್ತಿಗಳನ್ನು ಮಾರಾಟ ಮಾಡಲಾಗುತ್ತಿದೆ.

ಈಗಾಗಲೇ ಸ್ಥಳೀಯ ಕಲಾವಿದರು ಮಾರಾಟ ಮಾಡುತ್ತಿರುವ ಮಣ್ಣಿನ ಮೂರ್ತಿಗಳನ್ನು ಕೊಂಡು ಅಡ್ವಾನ್ ಕೊಟ್ಟು ಹೋದವರು, ಇದೀಗ ಪಿಒಪಿ ಮೂರ್ತಿಗಳಿಗೆ ಆಕರ್ಷಿತರಾಗಿ ಮಣ್ಣಿನ ಮೂರ್ತಿಗಳು ಬೇಡ ಎನ್ನುತ್ತಿದ್ದಾರೆ. ಕದ್ದು ಮುಚ್ಚಿ ನಡೆಯುತ್ತಿದ್ದ ಪಿಒಪಿ ಮೂರ್ತಿಗಳ ಮಾರಾಟ ಇದೀಗ ಕುಲ್ಲಂಕುಲ್ಲ ನಡೆಯುತ್ತಿದೆ. ಅಧಿಕಾರಿಗಳು ಇನ್ನಾದರೂ ಕ್ರಮ ತೆಗೆದುಕೊಳ್ಳಬೇಕು.

- ಕಲ್ಯಾಣ್, ಕೆಟಿಜೆ ನಗರ, ದಾವಣಗೆರೆ.

## ಐಫೋನ್ ಕಳ್ಳತನ

(1ನೇ ಪುಟದಿಂದ) ಚೆನ್ನೈಗೆ ತೆರಳುತ್ತಿತ್ತು. ಕಳ್ಳತನದ ಬಗ್ಗೆ ಲಾರಿ ಚಾಲಕ ಪೊಲೀಸರ ಬಳಿ ಬಂದಾಗ ಅವರು ದೂರು ದಾಖಲಿಸಿಕೊಂಡಿ ರಲಿಲ್ಲ. ನಿರ್ಲಕ್ಷ ತೋರಿದ ಆರೋ ಪದ ಮೇಲೆ ಪೊಲೀಸರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ.


**ಬೇಕಾಗಿದ್ದಾರೆ**

ಹೋಟೆಲ್‌ಗೆ ಅಡುಗೆ ಭಟ್ಟರು, ಸಹಾಯಕರು, ಮಹಿಳಾ ಸಹಾಯಕರು, ಕೇಟರಿಂಗ್ ಸೂಪರ್‌ವೈಸರ್ ಬೇಕಾಗಿದ್ದಾರೆ.

ಸಮಯ : ಬೆಳಿಗ್ಗೆ 5:00 ರಿಂದ ಮಧ್ಯಾಹ್ನ 2:00
ಮಧ್ಯಾಹ್ನ 2:00 ರಿಂದ ರಾತ್ರಿ 11:00 ರ ವರೆಗೆ
ಪಾಳಿಯಲ್ಲಿ ಕೆಲಸ ಮಾಡಲು ಸಿದ್ದರಿರಬೇಕು. ಸಂಪರ್ಕಿಸಿ :

ಮೊ. 63635 43487



**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**

ನಂ. 473/1,2-ಎ, 16ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೆಟಿಜೆ ನಗರ ದಾವಣಗೆರೆ - 577 002.
ಮೊ. : 99011 20124, 98447 36220

**ಪ್ರತಿಭಾ ಪುರಸ್ಕಾರ**

ಸಂಘವು 2023-24ನೇ ಸಾಲಿಗೆ ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, ಪುರಸ್ಕಾರವನ್ನು 2023-24ನೇ ಸಾಲಿನಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ತೇರ್ಗಡೆಯಾದ 10ನೇ ತರಗತಿಯ (SSLC State & CBSE Syllabus) 5 ಮಕ್ಕಳಿಗೆ ಹಾಗೂ 12ನೇ ತರಗತಿಯ (ಪಿಯುಸಿ) 5 ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡುತ್ತಿದ್ದು, ಸಂಘದ ಅರ್ಹ ಸದಸ್ಯರ ಮಕ್ಕಳು ತಮ್ಮ ನಕಲು ಅಂಕಪಟ್ಟಿಯೊಂದಿಗೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.09.2024 ಆಗಿರುತ್ತದೆ. ಅರ್ಜಿಯ ನಮೂನೆಯನ್ನು ಸಂಘದ ಆಡಳಿತ ಕಛೇರಿಯಲ್ಲಿ ಪಡೆಯಬಹುದು.

ಆಯ್ಕೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ದಿನಾಂಕ 20.09.2024ರಂದು ತೊಗಟವೀರ ಸಮುದಾಯ ಭವನ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ ಇಲ್ಲಿ ನಡೆಯುವ ಸಂಘದ 30ನೇ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನಿಸಲಾಗುವುದು.

ಸಹಿ/- ಆಡಳಿತ ಮಂಡಲಿ
ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ.



**ಆರೋಗ್ಯ ಮೇಳ-24**
ಆರೋಗ್ಯದ ಅರಿವೇ ಆಯುರ್ವೇದ

**ಮೇಳದ ವಿಶೇಷತೆ**

- ತಜ್ಞ ಆಯುರ್ವೇದ ವೈದ್ಯರಿಂದ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ.
- 30 ಕ್ಕೂ ಹೆಚ್ಚು ಆಯುರ್ವೇದ ಔಷಧಿ ಮಳಿಗೆಗಳು.
- ಎಲ್ಲಾ ತರಹದ ಆಯುರ್ವೇದ ಔಷಧಿಗಳ ಮೇಲೆ ಭಾರೀ ರಿಯಾಯಿತಿ.
- ಸಿರಿಧಾನ್ಯ, ವಿವಿಧ ಆಹಾರ ಧಾನ್ಯಗಳ ಪ್ರದರ್ಶನ ಮತ್ತು ಮಾರಾಟ.
- ಆಯುರ್ವೇದ ವೈದ್ಯರಿಂದ ಗೋಷ್ಠಿ.

**ಉಚಿತ**
ಸಕ್ಕರೆ ಕಾಯಿಲೆ ಪರೀಕ್ಷೆ ಮೂಳೆ ಸಾಂದ್ರತೆ ಪರೀಕ್ಷೆ ಇರುತ್ತದೆ.

ಇದೇ ಮೊದಲ ಬಾರಿಗೆ ಕರ್ನಾಟಕದ ಮಧ್ಯ ಭಾಗದಲ್ಲಿ ಆಯುರ್ವೇದ ಔಷಧಿಗಳ ಪ್ರದರ್ಶನ ಮತ್ತು ಭಾರತೀಯ ವೇದ ಸಂಸ್ಕೃತಿಯನ್ನು ಎಲ್ಲಾ ವರ್ಗದ ಜನರಿಗೆ ತಲುಪಿಸುವ ಪ್ರಯತ್ನ.

**ದಿನಾಂಕ : 1-9-2024ನೇ ಭಾನುವಾರ**
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 6-00 ರವರೆಗೆ
ಸ್ಥಳ : ಶ್ರೀ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪ, ಹದಡಿ ರಸ್ತೆ, ದಾವಣಗೆರೆ

ತಪಾಸಣೆಗೆ ಬರುವವರು ಮೊದಲೇ ಹೆಸರು ನೋಂದಾಯಿಸಿರಬೇಕು :

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
**ಶ್ರೀ ಧನ್ವಂತರಿ ಆಯುರ್ವೇದ ಔಷಧ ಪ್ರತಿನಿಧಿಗಳ ಸಂಘ (ರಿ.) ದಾವಣಗೆರೆ.**
ಮೊ. : 7892780466, 9008731327, 6364321664

ಸರ್ವರಿಗೂ ಸುಸ್ವಾಗತ

## ಮುಖ್ಯ ನಾಲೆಯ ದಂಡೆ ಒಡೆದು ಬೆಳೆ ಹಾನಿಯಾದ ಸ್ಥಳಕ್ಕೆ ಡಿಸಿ ಭೇಟಿ



ನ್ಯಾಮತಿ, ಆ.31- ತಾಲ್ಲೂಕಿನ ಬಸವನಹಳ್ಳಿ ಸಮೀಪದ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ನಾಲೆಯ ದಂಡೆ ಈಚೆಗೆ ಒಡೆದು ಬೆಳೆ ಹಾನಿಯಾದ ಸ್ಥಳಕ್ಕೆ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಶನಿವಾರ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ಈ ವೇಳೆ ಸ್ಥಳದಲ್ಲಿ ನಡೆಯುತ್ತಿದ್ದ ಕಾಮಗಾರಿ ದುರಸ್ತಿ ಬಗ್ಗೆ ಮಾಹಿತಿ ಪಡೆದು, ಗುಣಮಟ್ಟದಿಂದ ಹಾಗೂ ನಿಗದಿತ ವೇಳೆಗೆ ಕಾಮಗಾರಿ ಮುಗಿಸಿ, ರೈತರ ಬೆಳೆಗಳಿಗೆ ಸಮರ್ಪಕವಾಗಿ ನೀರನ್ನು ಹರಿಸುವ ವ್ಯವಸ್ಥೆ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

56 ಎಕರೆ ವಿಸ್ತೀರ್ಣದಲ್ಲಿ ಬೆಳೆದ ಬೆಳೆಯು ಹಾನಿಯಾಗಿದ್ದು, ಹಾನಿಯಾದ ಬೆಳೆಗೆ ಸರ್ಕಾರದಿಂದ ಪರಿಹಾರಕ್ಕಾಗಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಕಾಮಗಾರಿ ನಿರ್ವಹಣೆಗಾಗಿ 2 ಕೋಟಿ 19 ಲಕ್ಷ ಅನುದಾನಕ್ಕೆ ಇಲಾಖೆಯಿಂದ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಹೊನ್ನಾಳಿ ಉಪವಿಭಾಗಾಧಿಕಾರಿ ವಿ.ಅಭಿಷೇಕ್, ನ್ಯಾಮತಿ ತಹಶೀಲ್ದಾರ್ ಎಚ್.ಬಿ.ಗೋವಿಂದಪ್ಪ, ರಾಜಸ್ವ ನಿರೀಕ್ಷಕ ಸಂತೋಷ್, ತುಂಗಾ ಮೇಲ್ದಂಡೆ ಯೋಜನೆಯ ಇಇ ಕೃಷ್ಣಮೂರ್ತಿ, ಎಇಇ ಕೆ.ಎನ್.ಮಂಜುನಾಥ್, ಎಇ ಚೇತನ್, ರತ್ನನಾಯ್ಕ್ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

## ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಿದ ನೋಟಿಸ್ ನನಗೆ ಬಂದಿಲ್ಲ: ವಿನಯ್



ದಾವಣಗೆರೆ, ಆ.31- ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಿದ ಬಗ್ಗೆ ನನಗೆ ಯಾವುದೇ ನೋಟಿಸ್ ಬಂದಿಲ್ಲ ಎಂದು ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಸ್ಪಷ್ಟನೆ ನೀಡಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನನ್ನನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಿದ ಬಗ್ಗೆ ರಹೀಂ ಖಾನ್ ಅವರು ನೀಡಿದ ಪ್ರಕಟಣೆ ಅಧಿಕೃತವಾಗಿ ನನಗೆ ಬಂದಿಲ್ಲ, ನಾನು ಸೋಷಿಯಲ್ ಮೀಡಿಯಾದಲ್ಲಿ ಮಾತ್ರ ನೋಡಿದ್ದೇನೆ ಎಂದಿದ್ದಾರೆ.

# ಕಾಂಗ್ರೆಸ್ ಜನಪ್ರತಿನಿಧಿಗಳಿಂದ 'ರಾಜಭವನ ಚಲೋ'

## ವಿಪಕ್ಷಗಳ ನಾಯಕರ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಆಗ್ರಹಿಸಿ ಪ್ರತಿಭಟನೆ

ಬೆಂಗಳೂರು, ಆ. 31 - ಪ್ರಜಾತಾಂತ್ರಿಕವಾಗಿ ಚುನಾಯಿತ ವಾದ ಸರ್ಕಾರಗಳನ್ನು ವಾಮ ಮಾರ್ಗದಲ್ಲಿ ಅಸ್ಥಿರಗೊಳಿಸುವ ಕೇಂದ್ರ ಸರ್ಕಾರ ಮತ್ತು ರಾಜಭವನ ಷಡ್ಯಂತ್ರ ನಡೆಸಿವೆ ಎಂದು ಆರೋಪಿಸಿ ಕಾಂಗ್ರೆಸ್‌ನ ಎಲ್ಲಾ ಜನಪ್ರತಿನಿಧಿಗಳು ಇಂದಿಲ್ಲಿ ರಾಜಭವನ ಚಲೋ ನಡೆಸಿದರು.

ಅಲ್ಲದೆ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ಆಡಳಿತದಲ್ಲಿ ಸಚಿವರಾಗಿದ್ದ ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಹಾಗೂ ಜನಾರ್ದನ ರೆಡ್ಡಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದ ರಾಜ್ಯಪಾಲರ ತಾರತಮ್ಯ ನೀತಿಯನ್ನು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಖಂಡಿಸಿದ್ದಾರೆ.

ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ, ಮನವಿ ಸಲ್ಲಿಸುವುದಕ್ಕೂ ಮುನ್ನ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲಿ ಕಾಂಗ್ರೆಸ್‌ನ ಸಚಿವರು, ಸಂಸದರು, ಶಾಸಕರು ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿ ಕೇಂದ್ರ ಮತ್ತು ರಾಜ್ಯಪಾಲರ ವಿರುದ್ಧ ಪ್ರತಿಭಟಿಸಿದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆದೇಶ ನೀಡುತ್ತಾರೆ. ಆದರೆ ಎನ್‌ಡಿಎ ಕೂಟದವರು ಮಾಡಿರುವ ಭ್ರಷ್ಟಾಚಾರ ಆರೋಪಗಳಿಗೆ ಪ್ರಾಸಿಕ್ಯೂಷನ್ ಅನುಮತಿ ನೀಡದೇ ತಾರತಮ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.



ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಸೇರಿದಂತೆ, ಕಾಂಗ್ರೆಸ್ ಪಕ್ಷದ ಎಲ್ಲಾ ಜನಪ್ರತಿನಿಧಿಗಳು, ಮುಖಂಡರು ರಾಜಭವನ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜನತಂತ್ರ ವ್ಯವಸ್ಥೆಯಲ್ಲಿ ಬಹುಮತ ಹೊಂದಿರುವ ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸುವ ಏಕೈಕ ಉದ್ದೇಶದಿಂದ ಕೇಂದ್ರ ಸರ್ಕಾರ ರಾಜಭವನವನ್ನು ಗುರಾಣಿಯಾಗಿ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು.

ನಂತರ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ನಾಯತ್ವದಲ್ಲಿ ಗಾಂಧಿ ಪ್ರತಿಮೆಯಿಂದ ರಾಜಭವನದವರೆಗೂ ಸಿದ್ದರಾಮಯ್ಯ ಹೊರತುಪಡಿಸಿ ಉಳಿದೆಲ್ಲಾ ಕಾಂಗ್ರೆಸ್ ಜನಪ್ರತಿನಿಧಿಗಳು ರಾಜಭವನ ಚಲೋ ನಡೆಸಿದರು.

### ಸರ್ಕಾರ ಅಸ್ಥಿರಕ್ಕೆ ಷಡ್ಯಂತ್ರ



ರಾಜ್ಯಪಾಲರನ್ನು ಭೇಟಿ ಮಾಡಿ, ಎನ್‌ಡಿಎ ಸದಸ್ಯರ ಮೇಲಿರುವ ಆರೋಪಗಳಿಗೂ ಪ್ರಾಸಿಕ್ಯೂಷನ್‌ಗೆ ಅವಕಾಶ ಕೊಡಿ ಎಂದು ಕೇಳಲು ಹೊರಟವರು, ದಾರಿಯುದ್ದಕ್ಕೂ ರಾಜ್ಯಪಾಲರು ತೊಲಗಲಿ ಎಂದು ಘೋಷಣೆ ಕೂಗಿದರು.

ಸಿದ್ದರಾಮಯ್ಯ ನೇತೃತ್ವದ ಬಲಿಷ್ಠ ಸರ್ಕಾರವನ್ನು ಹಿಂಬಾಗಿಲಿನಿಂದ ಅಸ್ಥಿರಗೊಳಿಸಲು ಯತ್ನಿಸುತ್ತಿರುವುದು ಕುತಂತ್ರ ಎಂದು ಟೀಕಿಸಿದರು.

ನಂತರ ರಾಜಭವನಕ್ಕೆ ಧಾವಿಸಿ, ರಾಜ್ಯಪಾಲರನ್ನು ಭೇಟಿ ಮಾಡಿ ಐದು ಪುಟಗಳ ಮನವಿ ಪತ್ರ ಸಲ್ಲಿಸಿ, ಕುಮಾರಸ್ವಾಮಿ ಸೇರಿದಂತೆ ನಾಲ್ವರ ವಿರುದ್ಧವೂ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿ ಎಂದು ಮನವಿ ಮಾಡಿದರು.

ರಾಜ್ಯಪಾಲರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ರಾಜ್ಯಪಾಲರ ಹುದ್ದೆ ಸಂವಿಧಾನ ನೀಡಿರುವ ಪೀಠ. ರಾಜ್ಯಪಾಲರ ಕಚೇರಿ ಒಂದು ರಾಜಕೀಯ ಪಕ್ಷದ ಕಚೇರಿ ಆಗಬಾರದು. ಹುದ್ದೆಯ ಘನತೆಗೆ ಧಕ್ಕೆ ಬರುವಂತೆ ನಡೆದುಕೊಳ್ಳಬಾರದು ಎಂಬುದು ನಮ್ಮ ಅಭಿಲಾಷೆ ಎಂದು ಹೇಳಿದರು.

## ಶ್ಯಾಬನೂರಿನಲ್ಲಿ ನಾಳೆ ಪರವು

ದಾವಣಗೆರೆ, ಆ.31- ಶ್ಯಾಬನೂರಿನ ಶ್ರೀ ಈಶ್ವರ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವರುಗಳ ಪರವು ಕಾರ್ಯಕ್ರಮವು ನಾಡಿದ್ದು ದಿನಾಂಕ 2ರ ಸೋಮವಾರ ಮಧ್ಯಾಹ್ನ 2 ರಿಂದ ರಾತ್ರಿ 10.30ರವರೆಗೆ ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ



ದಾವಣಗೆರೆ, ಆ. 31- ಇಲ್ಲಿನ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 2ರ ಸೋಮವಾರ ಬೆನಕನ ಅಮಾವಾಸ್ಯೆ ಪ್ರಯುಕ್ತ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರಿಗೆ 108 ಲೀ. ಹಾಲಿನ ಅಭಿಷೇಕ, ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ವಸಂತ ಬಾಯಿ ವಸಂತರಾವ್ ಸಬಾಳೆ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ನಗರದಲ್ಲಿ ಇಂದು 100 ಗುರು ಲಿಂಗ ಜಂಗಮರ ಲಿಂಗ ಪೂಜೆ

ಪದ್ಮಶ್ರೀ ಚಿಂದೋಡಿ ಲೀಲಾರವರ ನಿರ್ಮಾಣದ ಶ್ರೀ ಸೋಮೇಶ್ವರ ದೇವಸ್ಥಾನದ ನೂತನ ಪ್ರಸಾದ ನಿಲಯದ ಉದ್ಘಾಟನೆ ಹಾಗೂ 100 ಜನ ಜಂಗಮರಿಗೆ ಲಿಂಗ ಪೂಜೆ ಹಾಗೂ ಸನ್ಮಾನ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಚಿಂದೋಡಿ ಎಲ್. ಚಂದ್ರಧರ್ ಅಧ್ಯಕ್ಷತೆ ವಹಿಸುವರು. ಆಂಧ್ರಪ್ರದೇಶದ ಉರುಗಾದ್ರಿ ಗವಿ ಮಠದ ಡಾ. ಕರಿಬಸವರಾಜೇಂದ್ರ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ, ಶ್ರೀ ಬಾಲ ಯೋಗಿ ಜಗದೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.



## ಭರದಿಂದ ಸಾಗಿದ ಭತ್ತದ ನಾಟಿ....

ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸಿದ ನಂತಸರ ಭದ್ರಾ ಅಚ್ಚುಕಟ್ಟಿನ ರೈತರು ಭತ್ತದ ಸಸಿ ಮಡಿ ಬೆಳಸಿ, ಇದೀಗ ಎಲ್ಲೆಡೆ ಭರದಿಂದ ಭತ್ತದ ನಾಟಿ ಕಾರ್ಯ ಸಾಗಿದ್ದು, ಶನಿವಾರ ಕುಣಿಬೆಳೆಕೆರೆ ಬಳಿ ಮಹಿಳೆಯರು ಜಿಟಿಜಿಟಿ ಮಳೆಯ ನಡುವೆಯೂ ಭತ್ತದ ನಾಟಿ ಮಾಡಿ ದರು. ತುಂಗಭದ್ರಾ ನದಿ ಪಾತ್ರದ ರೈತರು ಕಳೆದ ತಿಂಗಳು ಆರಂಭದಲ್ಲೇ ಮಾಡಿದ್ದ ಭತ್ತದ ನಾಟಿ ನಳನಳಿಸುತ್ತಿದ್ದು ಎಲ್ಲರ ಕಣ್ಮನ ಸೆಳೆಯುತ್ತಿದೆ.

ಚಿತ್ರ : ಜಿಗಳಿ ಪ್ರಕಾಶ್

## ಶಿವನಾರದಮುನಿಗೆ ಕಡೇ ಶ್ರಾವಣ ಶನಿವಾರದ ಅಲಂಕಾರ




**ಚಿಗಟೇರಿ**

ಹರಪನಹಳ್ಳಿ ಸೆ. 31- ತಾಲ್ಲೂಕಿನ ಚಿಗಟೇರಿ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಶಿವನಾರದ ಮುನಿ ದೇವಾಲಯದಲ್ಲಿ ಶ್ರಾವಣ ಮಾಸದ ಕೊನೆಯ ಶನಿವಾರದಂದು ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಪೂಜೆ ಹಾಗೂ ಅನ್ನ ದಾಸೋಹ ಕಾರ್ಯಕ್ರಮ ನೆರವೇರಿಸಲಾಯಿತು.

ದೇವಾಲಯದ ಅರ್ಚಕರು ಮಂತ್ರಘೋಷಗಳೊಂದಿಗೆ ಅಭಿಷೇಕ ನೆರವೇರಿಸಿದರು. ಸೇವಾ ಟ್ರಸ್ಟ್‌ನಿಂದ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.

ಅನ್ನ ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶ್ರೀ ನಾರದಮುನಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಸುಮಾರು 25 ಸಾವಿರಕ್ಕೂ ಹೆಚ್ಚು ಭಕ್ತರು ಅನ್ನ ದಾಸೋಹದಲ್ಲಿ ಪಾಲ್ಗೊಂಡಿದ್ದರು ಎಂದು ತಿಳಿಸಿದರು. ದಾವಣಗೆರೆ, ಶಿವಮೊಗ್ಗ, ವಿಜಯನಗರ, ಹಾವೇರಿ, ಚಿತ್ರದುರ್ಗ ಮುಂತಾದ ಕಡೆಯಿಂದ ಹಲವಾರು ಭಕ್ತರು ಆಗಮಿಸಿ ಶ್ರೀ ಸ್ವಾಮಿಯ ದರ್ಶನ ಪಡೆದರು.

ಶಾಮನೂರು ಬಸಣ್ಣ, ವಡ್ಡಿನಹಳ್ಳಿ ಷಡಕಣ್ಣ, ಕಲಪನಹಳ್ಳಿ ಬಸವಲಿಂಗಪ್ಪ, ಪಲ್ಲಾಗಟ್ಟೆ ನಾಗರಾಜ್, ಹುಣಸೇಹಳ್ಳಿ ಜಾತಪ್ಪ, ಚಿಗಟೇರಿ ಗ್ರಾಮದ ದ್ಯಾಮನಗೌಡ್ರು, ಜಯಣ್ಣ ಗೌಡ್ರು, ವೇದಮೂರ್ತಿ ಹೊಳಲ್ಕೆರೆ, ಚಿಗಟೇರಿ ರಾಜಣ್ಣ ಗೌಡ, ಹಾಲಪ್ಪ, ಬಳ್ಳಾರಿ ಧಾರ್ಮಿಕ ದತ್ತಿ ಇಲಾಖೆ ಸಹಾಯಕ ಆಯುಕ್ತರು, ಚಿಗಟೇರಿ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಾಡಿದ್ದು ಲಿಂಗೇಶ್ವರ ತೇರು



ದಾವಣಗೆರೆ, ಆ.31- ನಗರದ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವವು ಬರುವ ಸೆ. 3ರಂದು ನೆರವೇರಲಿದೆ. ಅಂದು ಬೆಳಿಗ್ಗೆ ಲಿಂಗೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ, ಪ್ರಸಾದ ವಿನಿಯೋಗ, ನಂತರ 9.30 ಕ್ಕೆ ಲಿಂಗೇಶ್ವರ ಸ್ವಾಮಿಯ ರಥೋತ್ಸವವು ನಡೆಯಲಿದೆ. ಉತ್ಸವದ ಮಾರ್ಗವು ಗಾಂಧಿ ಸರ್ಕಲ್, ಜಯದೇವ ಸರ್ಕಲ್, ಲಾಯರ್ ರಸ್ತೆ ಮುಖಾಂತರ ಪಿ.ಬಿ. ರಸ್ತೆಯ ದೇವಸ್ಥಾನಕ್ಕೆ ಬರುವುದು.

## ಕೂಡಲಿ ಸಂಗಮದಲ್ಲಿ ಇಂದು ಬಾಗಿನ

ಭಾರತ ವಿಕಾಸ್ ಪರಿಷತ್ತಿನ ದಾವಣಗೆರೆ ಜಿಲ್ಲಾ ಗೌತಮ್ ಶಾಖೆಯ ಕಾರ್ಯಕಾರಿ ಸದಸ್ಯರು ಹಾಗೂ ಇತರ ಸದಸ್ಯರಿಂದ ಭದ್ರೆಗೆ ಹಾಗೂ ಕೂಡಲಿ ಸಂಗಮದಲ್ಲಿ ಇಂದು ಬಾಗಿನ ಸಮರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಗೌತಮ ಶಾಖೆ ಅಧ್ಯಕ್ಷ ಅಜ್ಜಂಪುರ ವಿಜಯಕುಮಾರ್ ತಿಳಿಸಿದ್ದಾರೆ.

**ಭದ್ರಾ ಜಲಾಶಯ**

ನೀರಿನ ಮಟ್ಟ : 182 ಅಡಿ 9 ಇಂಚು
ಒಳ ಹರಿವು : 11253 ಕ್ಯೂಸೆಕ್ಸ್
ಹೊರ ಹರಿವು :4193 ಕ್ಯೂಸೆಕ್ಸ್
ಕಳೆದ ವರ್ಷ : 164 ಅಡಿ 2 ಇಂಚು

## ಕಕ್ಕರಗೊಳ್ಳದಲ್ಲಿ ಇಂದು ಕೆರೆ ಏರಿ ಭರಮದೇವರಿಗೆ ವಿಶೇಷ ಪೂಜೆ,

ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಸಮೀಪವಿರುವ ಕೆರೆ ಏರಿ ಭರಮ ದೇವರ ದೇವಸ್ಥಾನ ಸಮಿತಿ ವತಿಯಿಂದ ಶ್ರಾವಣ ಮಾಸದ ಅಂಗವಾಗಿ ಇಂದು ಬೆಳಿಗ್ಗೆ 6 ಗಂಟೆಗೆ ಭರಮ ದೇವರಿಗ ಮಹಾ ಅಭಿಷೇಕ, ಮಧ್ಯಾಹ್ನ 12 ರಿಂದ ಸಂಜೆ 4 ರವರೆಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ದೇವಸ್ಥಾನ ಸಮಿತಿ ಕೋರಿದೆ.


• Architect
• Civil Engineer
• Accountant/Clerk
JOIN OUR TEAM
WE ARE HIRING!
Walk in interview : 02-09-2024 Monday 10 am to 6 PM
S.R. Associate
# 831, 2nd Main, 6th Main,
S. Nijalingappa Badavane, DAVNAGERE
e-mail : shiva.soham2008@gmail.com

REQUIRED
Young lady with minimum SSLC qualification required to take care of two and half year boy.
Apply with biodata with reference
Contact no. : 96861 95323
Shanthala, Chamrajpet Davangere.

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೆಂಗಳೂರು.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
ಚಾರ್‌ಧಾಮ್ ವಿಶೇಷ ಯಾತ್ರೆ OCT
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ*)
ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ದೋಧಾಮ್ ವಿಶೇಷ ಯಾತ್ರೆ OCT
ಸಂದರ್ಶಿಸುವ ಸ್ಥಳಗಳು : ಕೇದಾರ್‌ನಾಥ್, ಬದರಿನಾಥ್
ವೈಷ್ಣೋದೇವಿ, ಕುಲುಮನಾಲಿ, ಆಗ್ರಾ, ಮಥುರಾ ಪ್ರವಾಸ
ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್, ವಾಘಾ ಬಾರ್ಡರ್, ದೆಹಲಿ, ಆಗ್ರಾ, ಕುರುಕ್ಷೇತ್ರ
DEC ಕಾಶಿ ಯಾತ್ರೆ
ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
NOV ರಾಮೇಶ್ವರಂ ಯಾತ್ರೆ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

ಸಾದರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ
16, ಬಿ ಕ್ರಾಸ್, # 2000/A28
ತರಳಬಾಳು ಬಡಾವಣೆ, ದಾವಣಗೆರೆ-5.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಅರ್ಜಿಗಳ ಆಹ್ವಾನ
ಬಿ.ಕಾಂ. ವಿದ್ಯಾರ್ಹತೆಯುಳ್ಳವರು ಮತ್ತು 18 ರಿಂದ 35 ವರ್ಷದೊಳಗಿರುವವರು, ಸ್ವ- ವಿವರವುಳ್ಳ ಸಂಪೂರ್ಣ ಮಾಹಿತಿಯನ್ನು, 2 ಭಾವಚಿತ್ರದೊಂದಿಗೆ, ದಿನಾಂಕ : 22.9.2024 ರೊಳಗಾಗಿ ಅರ್ಜಿಯನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು. ಸಂಬಳ ನೆಗೋಷಿಯೋಬಲ್
ಸಹಿ/- ಅಧ್ಯಕ್ಷರು
94485 34375, 9448515579

MRM TRUST (R)
SMR GROUP OF INSTITUTIONS
SMR SISM
Hadadi Road, Next to TVS Show Room, Davangere.





BCA & B.Com
Admissions Open For 2024-25
Laptops For All the Students
Only few seats available...
What you Get @ SMR SISM
Highly Qualified and Experienced Faculty ✓
Well Equipped Lab with Latest Technologies ✓
Bank Loan Facilites ✓
Reasonable Fee Structure ✓
Industry 4.0 Centric skill based learning system ✓
100% Placement Assistance ✓
Separate Hostel Facility for boys and Girils ✓
Internship with BCA Course
Associated with VBANG Info Solutions pvt Ltd., To Provide Advanced Technologies Knowledge In House training with Internship
Dr. Basavaraj Mudegowdra, Chairman
Manavalli Matt K.S. Principal 876-278-4842/968-645-0470
Smt. Geetha Mudegowdra Secretary

ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ.,
1ನೇ ಮಹಡಿ, ಹಳೇ ಮಹಾರಾಷ್ಟ್ರ ಬ್ಯಾಂಕ್ ಬಿಲ್ಡಿಂಗ್, ಪಿ.ಬಿ. ರಸ್ತೆ, ಹರಿಹರ.
2023-24ನೇ ಸಾಲಿನ ಹತ್ತನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ






ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ., ಹರಿಹರ ಇವರ 10ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 01.09.2024ನೇ ಭಾನುವಾರ ಮಧ್ಯಾಹ್ನ 12.00 ಘಂಟೆಗೆ ಹರಿಹರದ ರಚನಾ ಕ್ರೀಡಾ ಕ್ಲಬ್, ಗಾಂಧಿ ಮೈದಾನದಲ್ಲಿ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಾಗರಾಜ ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.
ನಾಗರಾಜ ಹೆಚ್.ಎಂ. ಅಧ್ಯಕ್ಷರು
ಡಾ. ಪ್ರವೀಣ ಹೆಗಡೆ. ಉಪಾಧ್ಯಕ್ಷರು
ಪದಾಧಿಕಾರಿಗಳು :














ವೀರಣ್ಣ ಜಿ.ಕೆ. ನಿರ್ದೇಶಕರು
ಮಂಜುನಾಥ್ ಹೆಚ್.ಎಸ್. ನಿರ್ದೇಶಕರು
ನಂಜಪ್ಪ ಜಿ. ನಿರ್ದೇಶಕರು
ಸುಜಯ್ ಹೆಚ್.ವಿ. ನಿರ್ದೇಶಕರು
ಮಯೂರ್ ಹೆಚ್.ಎನ್. ನಿರ್ದೇಶಕರು
ರಾಘವೇಂದ್ರ ಬೊಂಗಾಳೆ ನಿರ್ದೇಶಕರು
ಡಾ. ಸೀಮಾ ಎನ್. ನಿರ್ದೇಶಕರು
ಶ್ರೀಮತಿ ಸುನಿತಾ ಪಿ. ಬದ್ದಿ ನಿರ್ದೇಶಕರು
ಶ್ರೀಮತಿ ನಾಗರತ್ನ ಜಿ.ಕೆ. ನಿರ್ದೇಶಕರು
ಶ್ರೀಮತಿ ಮಂಜುಳಾ ಪ್ರಸಾದ್ ನಿರ್ದೇಶಕರು
ವಿಶೇಷ ಸೂಚನೆ:
ಆಮಂತ್ರಣ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಕೋರಿದೆ.
ಆಡಳಿತ ಮಂಡಳಿಯ ಪರವಾಗಿ
ರುದ್ರಯ್ಯ ಕಳ್ಳಿಮಠ
ಪ್ರಭಾರ ಕಾರ್ಯದರ್ಶಿ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas